
# ಬೃಹಚ್ಚರಣ

ಸಂಘದ ಸದಸ್ಯರಾಗಿ
ಪೋಷಕರು : ರೂ. 5,000/-
ಸದಸ್ಯತ್ವ : ರೂ. 1,000/-
ವಾರ್ಷಿಕ ನವೀಕರಣ : ರೂ. 200/-

ಸಂಪಾದಕ ಮಂಡಳಿ

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಬಿ.ಎಸ್. ಸೂರ್ಯನಾರಾಯಣ | ಸದಸ್ಯರು |
| ಕೆ.ಸಿ. ನಟರಾಜನ್ | ಸದಸ್ಯರು |
| ಎನ್. ಚಂದ್ರಮೌಳಿ | ಸದಸ್ಯರು |
| ಅಚಲ ರಮೇಶ್ | ಸದಸ್ಯರು |
| ಕೆ.ಎಸ್. ಮಧುಸೂದನ | ಸಂಪಾದಕ |

ಸಂಪುಟ : 2 ಸಂಚಿಕೆ : 2 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2012

## ಅರ್ಪಣೆ

ಬೃಹಚ್ಚರಣ

**ಈ ಸಂಚಿಕೆಯನ್ನು ಬೃಹಚ್ಚರಣ ಸಂಘದ ಪ್ರಥಮ ಅಧ್ಯಕ್ಷರಾಗಿದ್ದ ಆನೇಕಲ್ ಹೆಡ್‌ಮಾಸ್ಟರ್ ಆರ್. ಕೃಷ್ಣಮೂರ್ತಿರವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.**

## ಸಂಪಾದಕೀಯ

**'ಬೃಹಚ್ಚರಣ' ಪತ್ರಿಕೆಗೆ ಲೇಖನಗಳನ್ನು ಕಳಿಸುವ ನಮ್ಮ ಲೇಖಕರು ದಯವಿಟ್ಟು ಗಮನಿಸಿ**

- ಬಿಳಿಯ ಬಣ್ಣದ ಫುಲ್‌ಸ್ಕೇಪ್ ಹಾಳೆಯ ಒಂದೇ ಬದಿಯಲ್ಲಿ ಸ್ಪಷ್ಟ (Legible) ವಾಗಿ ಬರೆಯಿರಿ.
- ಲೇಖನಗಳು ಆದಷ್ಟು ಸಂಕ್ಷಿಪ್ತವಾಗಿರಲಿ.
- ಕಾಗುಣಿತ ತಪ್ಪುಗಳು, ವ್ಯಾಕರಣ ದೋಷಗಳು ಇಲ್ಲದಂತೆ ಎಚ್ಚರಿಕೆ ವಹಿಸಿ.
- ಬರವಣಿಗೆಯ ಕ್ರಮ, ವಿಚಾರಗಳು, ವಸ್ತುವಿನಲ್ಲಿ ಹೊಸತನವಿರಲಿ.
- ಜೀವನದ ವೈವಿಧ್ಯತೆ, ಮನುಷ್ಯನ ಗುಣಶೀಲಸ್ವಭಾವ, ಭಾವ ಅನುಭವಗಳ ಅನನ್ಯತೆ ಇತ್ಯಾದಿಗಳನ್ನು ಕುರಿತು ಚಿಂತನ ಮಂತನ ಮಾಡಿ ಬರೆಯಿರಿ.
- ನಮ್ಮ ಜನಾಂಗದ ಕ್ರಿಯಾಶೀಲ ತರುಣ, ತರುಣಿಯರು ತಮ್ಮ ಕ್ಷೇತ್ರಗಳಲ್ಲಿನ ವಿಷಯಗಳನ್ನು ಕುರಿತು ಬೆಳಕು ಚೆಲ್ಲುವಂತೆ ಬರೆಯಬೇಕೆಂಬುದು ನನ್ನ ಆಸೆ.

■ ಕೆ.ಎಸ್. ಮಧುಸೂದನ

## ಅಧ್ಯಕ್ಷರ ನುಡಿ

(4)

*ಆತ್ಮೀಯ ಬಂಧುಗಳಿಗೆ ನಮಸ್ಕಾರ,*

ನಮ್ಮೆಲ್ಲರ ಧಾರ್ಮಿಕ ಕ್ಷೇತ್ರ ಕಿತ್ತಗಾನಹಳ್ಳಿಯಲ್ಲಿ ೨೬-೨-೨೦೧೨ರಿಂದ ನಡೆದ 'ನಾಗಾರಾಧನ', 'ಸುಬ್ರಹ್ಮಣ್ಯ ಸ್ವಾಮಿ' ದೇವರ ಉತ್ಸವ ಶ್ರೀನಿವಾಸ ಕಲ್ಯಾಣ, ರಥೋತ್ಸವಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೃಹಚ್ಚರಣ ಕುಟುಂಬದ ಸದಸ್ಯರು ಭಾಗವಹಿಸಿರುವುದಕ್ಕೆ ನಮ್ಮೆಲ್ಲರ ಮನಸ್ಸಿಗೆ ಸಂತೋಷವಾಗಿದೆ. ನಮ್ಮೆಲ್ಲರ ಕಾರ್ಯಕ್ರಮಗಳಿಗೆ ಸಹಕಾರ ನೀಡುರುತ್ತಿರುವ ವೇ|| ಬ್ರ|| ನಂಜುಂಡ ದೀಕ್ಷಿತರಿಗೆ ನಮ್ಮ ಕೃತಜ್ಞತೆಗಳು.


ಸಂಘವು ಪದೇ ಪದೇ ಯಾವುದಾದರೂ ಕಾರಣಕ್ಕೆ ತಮ್ಮೆಲ್ಲರ ಕುಟುಂಬದ ಸದಸ್ಯರು ಸೇರಿ ತಮ್ಮ ತಮ್ಮ ಬಾಂಧವ್ಯದ ಬೆಸುಗೆ ಗಟ್ಟಿ ಮಾಡಿಕೊಳ್ಳಬೇಕೆಂದು ಆಶಿಸುತ್ತದೆ.

ನಮ್ಮ ಸಂಘದ ಸದಸ್ಯರಾದ ಶ್ರೀಮತಿ ಗಾಯತ್ರಿ ರಾಜಾಪುರ ಹಾಗೂ ಶ್ರೀ ಆರ್.ಎಸ್. ರಾಜಗೋಪಾಲ್‌ರವರು ತಮ್ಮ ತಮ್ಮ ಕ್ಷೇತ್ರದ ಅನುಭವದ ಕೃತಿಗಳನ್ನು ಲೋಕಾರ್ಪಣೆ ಮಾಡಿರುವುದಕ್ಕೆ ಅಭಿನಂದನಾರ್ಹರು. ಶ್ರೀಯುತರುಗಳಿಂದ ಇನ್ನೂ ಹೆಚ್ಚಿನ ಸಾರ್ವಜನಿಕರಿಗೆ ಉಪಯುಕ್ತವಾಗುವ ಪುಸ್ತಕಗಳು ಪ್ರಕಟಣೆಗೊಳ್ಳಲೆಂದು ಸಂಘವು ಆಶಿಸುತ್ತದೆ.

ಹಿರಿಯ ಸದಸ್ಯ ಶ್ರೀ ಎಸ್. ಶಿವರಾಂರವರಿಗೆ ರಾಜ್ಯ ಚಲನಚಿತ್ರ ರಂಗಕ್ಕೆ ಸೇವೆ ಸಲ್ಲಿಸಿರುವುದನ್ನು ಕರ್ನಾಟಕ ಸರ್ಕಾರ ಗುರುತಿಸಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ.

ತಮ್ಮ ಸಲಹೆಗಳಂತೆ "ಬೃಹಚ್ಚರಣ" ಪತ್ರಿಕೆಯಲ್ಲಿ ಹೊಸ ವಿವಿಧ ಅಂಕಣಗಳನ್ನು ತರಲಾಗಿದ್ದು, ತಮ್ಮಿಂದ ಲೇಖನಗಳನ್ನು ಆಹ್ವಾನಿಸುತ್ತಿದೆ. ಸಂಘವು ಕಾರ್ಯಗಳು ಸುಗಮವಾಗಿ ನಡೆಯುತ್ತಿರುವುದಕ್ಕೆ ತಮ್ಮ ಪ್ರತ್ಯಕ್ಷ – ಪರೋಕ್ಷ ನೆರವಿಗೆ ಕೃತಜ್ಞರಾಗಿದ್ದೇವೆ.

■ ಎಸ್. ಸೋಮಸುಂದರ



## ಅಭಿನಂದನೆಗಳು

ನಮ್ಮ ಸಮುದಾಯದ ಹಿರಿಯ ಸದಸ್ಯರೂ ಸಂಘದ ಹಿತೈಷಿಗಳೂ ಆದ ಶ್ರೀ ಎಸ್. ಶಿವರಾಂರವರು, ಕನ್ನಡ ಚಿತ್ರರಂಗಕ್ಕೆ ಅವಿರತವಾಗಿ ಸೇವೆ ಸಲ್ಲಿಸಿರುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ೨೦೧೧-೧೨ನೇ ಇಸವಿ ಚಲನಚಿತ್ರ ಪ್ರಶಸ್ತಿ 'ಡಾ. ರಾಜ್‌ಕುಮಾರ್ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಹಿರಿಯ ನಟ, ನಿರ್ಮಾಪಕ-ನಿರ್ದೇಶಕ ಶ್ರೀ ಶಿವರಾಂರವರಿಗೆ ರಾಜ್ಯ ಪ್ರಶಸ್ತಿಯೊಂದಿಗೆ, ಅಂತರರಾಷ್ಟ್ರೀಯ ಪ್ರಶಸ್ತಿಯೂ ಅವರ ಚಿತ್ರರಂಗದ ಸೇವೆಗೆ ಲಭಿಸಲಿ ಎಂದು ಸಂಘವು ಶುಭ ಹಾರೈಸುತ್ತದೆ.



## ಮೈ.ಮಂ.ದ್ರಾ.ಬೃ.ಸಂಘದ ಕಾರ್ಯಕಾರಿ ಸಮಿತಿ

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ**, ಬೆಂಗಳೂರು |
| ಉಪಾಧ್ಯಕ್ಷರು | : | **ಕೆ.ಬಿ. ಮುರಳಿ**, ಬೆಂಗಳೂರು |
| | | **ಕೆ. ಮಂಜುನಾರಾಯಣ್**, ಬೆಂಗಳೂರು |
| ಕಾರ್ಯದರ್ಶಿ | : | **ವಿ.ಎಸ್. ಮಣಿ**, ಕಿತ್ತಿಗಾನಹಳ್ಳಿ |
| ಸಹಕಾರ್ಯದರ್ಶಿ | : | **ವಿ. ಅರುಣ**, ಬೆಂಗಳೂರು |
| ಖಜಾಂಚಿ | : | **ಎಸ್. ಸತ್ಯನಾರಾಯಣ**, ಕಿತ್ತಿಗಾನಹಳ್ಳಿ |
| ಲೆಕ್ಕಪರಿಶೋಧಕರು | : | **ಎಚ್.ಕೆ. ಶಶಿಧರ್**, ಬೆಂಗಳೂರು |
| ಸದಸ್ಯರು | : | **ಆರ್.ಎ. ಈಶ್ವರನ್**, ಕಿತ್ತಿಗಾನಹಳ್ಳಿ |
| | | **ಟಿ.ಎಸ್. ಮಣಿ**, ಕಿತ್ತಿಗಾನಹಳ್ಳಿ |
| | | **ಎಸ್. ಶ್ರೀನಿವಾಸನ್**, ಹೊಸಕೋಟೆ |
| | | **ಆರ್. ಗೋಪಾಲಕೃಷ್ಣ**, ಬೆಂಗಳೂರು |
| | | **ಎಸ್. ಸಿ. ಶ್ರೀನಿವಾಸ**, ಸರ್ಜಾಪುರ |
| | | **ಕೆ. ಬಿ. ಸುರೇಶ್**, ಬೆಂಗಳೂರು |
| | | **ಬಿ. ಶ್ರೀಧರ್**, ಸಂಣೆ |
| | | **ಕೆ. ಜಿ. ವೆಂಕಟೇಶ್**, ಬೆಂಗಳೂರು |
| | | **ಸರಸ್ವತಿ ನಟರಾಜನ್**, ಬೆಂಗಳೂರು |

## ಅರವತ್ತು ವಸಂತಗಳನ್ನು ಕಂಡಿರುವ ಈ ಸದಸ್ಯರಿಗೆ ವಂದನೆಗಳು

ಶ್ರೀ ವಿ.ಎಸ್. ಮಣಿ
ಡಾ. ಭಾನು ಪ್ರಕಾಶ್
ಶ್ರೀ ಜಿ. ಮುತ್ತುಸ್ವಾಮಿ
ಶ್ರೀ ಬೆಳ್ಳಾವೆ ನಾಗರಾಜ್
ಶ್ರೀ ಎನ್. ಅಶ್ವಥ್
ಶ್ರೀ ಆರ್.ಜಿ. ವಿಜಯಸಾರಥಿ

## ನಮ್ಮನ್ನಗಲಿದ ನಮ್ಮವರು

ಶ್ರೀಮತಿ ಲಕ್ಷ್ಮೀದೇವಮ್ಮ (ದೊಮ್ಮಸಂದ್ರ).
ಶ್ರೀಮತಿ ಅನ್ನಪೂರ್ಣಮ್ಮ
ಶ್ರೀ ಕೆ.ಎಸ್. ಬಾಲಸುಬ್ರಹ್ಮಣ್ಯ
ಶ್ರೀಮತಿ ಶಾಂತಮ್ಮ ಅನಂತರಾಮ್

ಇವರಿಗೆ ನಮ್ಮ ಶ್ರದ್ಧಾಂಜಲಿ

## ಬೃಹಚ್ಚರಣ ಗ್ರಾಮಗಳು-4. ದೊಡ್ಡ ಸಣ್ಣೆ



ಬೆಂಗಳೂರು ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಸಣ್ಣೆ ಗ್ರಾಮವು ಬೆಂಗಳೂರು ನಗರದಿಂದ ೩.೨ ಕ್ರಿ.ಮಿ. ದೂರವಿದ್ದು, ೨೦೦ ಮನೆಗಳು ಕೃಷಿ ಆಧಾರಿತ ಕುಗ್ರಾಮ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೇವಲ ನಾಲ್ಕು ಕಿ.ಮೀ. ದೂರವಿರುವ ಸಣ್ಣೆಯಲ್ಲಿ ನೆಲೆಸಿದ್ದ 'ಬೃಹಚ್ಚರಣ'ದವರೂ ಕೃಷಿಕಾರರೇ.

ಸಣ್ಣೆ ಮನೆತನದ ಶ್ರೀಶ್ರೀನಿವಾಸಯ್ಯ, ಹಿರಿಯ ಡಿ.ವಿ.ಜಿ.ಯವರ ಸೋದರಳಿಯ. ೧೯೬೦ರಲ್ಲಿ ಶ್ರೀ ರಾಮದೇವಸ್ಥಾನ ಕಟ್ಟಿಸಿರುತ್ತಾರೆ.

ಸಣ್ಣೆಗ್ರಾಮದಿಂದ, ೮ ಕಿ.ಮೀ. ದೂರದಲ್ಲಿರುವ ಆವತಿ ಬೆಟ್ಟದ ಮೇಲಿರುವ ತಿಮ್ಮರಾಯಸ್ವಾಮಿ ದೇವಸ್ಥಾನಕ್ಕೆ ೫೦೦ ವರ್ಷಗಳ ಇತಿಹಾಸವಿದ್ದು ಪ್ರವಾಸಿ ಕ್ಷೇತ್ರವಾಗಿದೆ.

ಸಣ್ಣೆಯ ಹನುಮಂತರಾಯರು ಜನಾನುರಾಗಿಗಳಾಗಿದ್ದು, ಮೈಸೂರು ರಾಜ್ಯ ಸಭಾ ಸದಸ್ಯರಾಗಿ ೩೦ ವರ್ಷ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸೇವೆ ಸಲ್ಲಿಸಿರುತ್ತಾರೆ. ಅವರ ಮಕ್ಕಳಾದ ಶ್ರೀ ತಿಮ್ಮಪ್ಪಯ್ಯ, ಶ್ರೀ ಅಪ್ಪಾಜಿರಾವ್, ಶ್ರೀ ರಾಮಚಂದ್ರ, ಪಟೇಲ್ ರಾಮಯ್ಯನವರು ಉದ್ಯೋಗಾಕಾಂಕ್ಷಿಗಳಾಗಿ ಬೆಂಗಳೂರಿಗೆ ಬಂದು ನೆಲೆಸಿರುತ್ತಾರೆ. ಇವರುಗಳ ಮಕ್ಕಳಾದ ಶ್ರೀ ಸೂರಪ್ಪ, ಡಾ॥ ವೆಂಕಟಕೃಷ್ಣ, ಶ್ರೀ ಶಾಮಣ್ಣ ಮತ್ತು ವೆಂಕಟಸುಬ್ಬಯ್ಯರವರು ಗಳಿಗೆ ೮೦ ವರ್ಷ ತುಂಬಿದ್ದು ನಮ್ಮೊಂದಿಗಿರುವುದು ಸಂತಸದ ವಿಷಯ.

ಸಣ್ಣೆ ಸೂರಪ್ಪನವರು ಗಲಿಯಾ ಕೋಟವಾಲ ಎಂಬ ಖಾಸಗಿ ಸಂಸ್ಥೆಯಲ್ಲಿದ್ದರೂ ರಾಜ್ಯ ಸಹಕಾರ ಚಳವಳಿಯ ಮುಖಂಡರಲ್ಲೊಬ್ಬರು ಬೆಂಗಳೂರು ಸಿಟಿಮಾರ್ಕೇಟಿನಲ್ಲಿ "ಬಾಂದುನವರ ಸೊಸೈಟಿ" ಮಾಡಿ ನಡೆಸಿದವರು.

ಹೆಡ್‌ಮಾಸ್ಟರ್ ಕೃಷ್ಣಮೂರ್ತಿ, ಬಿದಿರಗೆರೆ ನಾಗರಾಜ್, ಕೃಷ್ಣನ್, ಅಲಸೂರು ಶ್ರೀಕಂಠಯ್ಯ, ಎ.ವಿ. ಲಕ್ಷ್ಮಣ ಐಯ್ಯರ್, ಪಟ್ಟಾಭಿರಾಮಯ್ಯನವರೊಂದಿಗೆ "ಬೃಹಚ್ಚರಣ" ಸಂಘ ಸ್ಥಾಪಕ ಸದಸ್ಯರು.

■ ಎಸ್. ಸೋಮಸುಂದರ

# ಸಂಗೀತ ವಿದೂಷಿ ಡಾ. ಗಾಯತ್ರಿ ರಾಜಾಪುರ್ ಕಾಸಬಾಂ

ಇವರ ಜನ್ಮ 16–03–1938ರಲ್ಲಿ "ಹೊಳೆನರಸೀಪುರ"ದಲ್ಲಿ ಆಯಿತು. ಇವರ ತಂದೆ, ತಾಯಿ, ದಿವಂಗತ "ಶ್ರೀ ಆರ್. (ರಾಜಾಪುರ)ದ "ರಾಮಾಯಣ ರಾಮಚಂದ್ರ ರಾಯರ" ಕಿರಿಯ ಮಗ "ಆರ್. ಕೃಷ್ಣಮೂರ್ತಿ" ಮತ್ತು "ಇನ್ನಕ್ಕಿಯ ವೆಂಕಟರಮಣಯ್ಯ" ಅವರ ಮಗಳಾದ "ಪದ್ಮಾವತಮ್ಮ"ನವರ ಒಂಬತ್ತು ಮಕ್ಕಳಲ್ಲಿ ಹಿರಿಯ ಪುತ್ರಿ "ಗಾಯಿತ್ರಿ"

ಗಾಯಿತ್ರಿ ಅವರಿಗೆ ಚಿಕ್ಕವಯಸ್ಸಿನಿಂದಲೇ ಸಂಸ್ಕೃತ ಹಾಗೂ ಸಂಗೀತದಲ್ಲಿ ಆಸಕ್ತಿ ಇತ್ತು. ಇವರು ತನ್ನ 5ನೇ ವಯಸ್ಸಿನಲ್ಲೇ ಕಛೇರಿ ಮಾಡುವ ಸಾಮರ್ಥ್ಯ ಹೊಂದಿದ್ದರು. ತಮ್ಮ ಚಿಕ್ಕವಯಸ್ಸಿನಲ್ಲೇ "ಚಿ॥ ಸದಾಶಿವಯ್ಯ"ನವರ ನಿರ್ದೇಶನದಲ್ಲಿ ತಯಾರಾದ "ಸರ್ವಮಂಗಳ" ಎಂಬ ನಾಟಕದಲ್ಲಿ ಶಿವನಪಾತ್ರದ ಹಾಡುಗಳನ್ನು ಸುಮಧುರವಾಗಿ ಹಾಡಿ ಎಲ್ಲರ ಪ್ರಶಂಸೆಗಳಿಸಿದ್ದರು.

ಗಾಯಿತ್ರಿ ರಾಜಾಪುರ್ ಕಾಸಬಾಂಬ್‌ರವರು ಗೋಟುವಾಧ್ಯ ಪ್ರವೀಣೆ. ಇವರು "ಸಂಗೀತ ಕಲಾನಿಧಿ" "ಶ್ರೀ ಬೂದಲೂರು ಕೃಷ್ಣಮೂರ್ತಿ ಶಾಸ್ತ್ರಿಗಳ್" ("ಗೋಟುವಾದ್ಯ ನುಡಿಸುವ ಮೊಟ್ಟಮೊದಲ ಸಂಗೀತಗಾರರು") ಅವರ ಶಿಷ್ಯರಾಗಿದ್ದರು.

ಗಾಯಿತ್ರಿ ಅವರು "ಸಂಗೀತ ವಿದ್ವಾನ್" ಎಂಬ ಪದವಿಯನ್ನು ಕರ್ನಾಟಕ ಮ್ಯೂಜಿಕ್ ಕಾಲೇಜ್, ಮದ್ರಾಸಿನಲ್ಲಿ ಗೋಟು ವಾದ್ಯ ಮತ್ತು ಹಾಡುಗಾರಿಕೆಯಲ್ಲಿ ಪಡೆದರು. ಆಗ ಆ ಕಾಲೇಜಿನಲ್ಲಿ ಅವರ ಗುರುಗಳು "ತಿರುಪಾಂಬರ್ ಸ್ವಾಮಿನಾಥ ಪಿಳ್ಳೈ" "ಶ್ರೀಮತಿ ಬೃಂದಮ್ಮ" ಮತ್ತು "ಮಾಯಾವರಂ ಕೃಷ್ಣ ಅಯ್ಯರ್" ಗಾಯತ್ರಿ ಅವರು ಸಂಗೀತವನ್ನು "ದಿವಂಗತ ಸಂಗೀತಕಲಾನಿಧಿ ಮುಸುರಿ ಸುಬ್ರಮಣ್ಯಂ ಅಯ್ಯರ್" ಅವರ ಶಿಷ್ಯರಾಗಿ ಕಲಿತರು.

ಕರ್ನಾಟಕ ಮಹಾವಿದ್ಯಾಲಯ ಧಾರವಾಡದಲ್ಲಿ ಕರ್ನಾಟಕ ಸಂಗೀತ ಹೇಳಿಕೊಡುತ್ತಾ ಹಾಗೇ ಬಿ.ಎ. ಪದವಿ ಪಡೆದರು. ಆನಂತರ ಹವಾಯಿ ಮಹಾವಿದ್ಯಾಲಯದಲ್ಲಿ "Ethnomusicology"ಯ ಬಗ್ಗೆ ಎಂ.ಎ. ಪದವಿ ಪಡೆದರು. ನಂತರ ವಾಷಿಂಗಟನ್ ಮಹಾವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿ ಪಡೆದರು. ಮತ್ತು ಕರ್ನಾಟಕ ಜಾನಪದ ಸಂಗೀತ ಸಾಹಿತ್ಯದಲ್ಲಿ ಸಂಶೋಧನೆ ನಡೆಸಿ "ಡಾಕ್ಟರೇಟ್" ಪದವಿಯನ್ನೂ ಪಡೆದರು.

"ಹವಾಯಿ" ಮತ್ತು "ವಾಷಿಂಗ್‌ಟನ್" ಮಹಾವಿದ್ಯಾಲಯದಲ್ಲಿ "ಪ್ರಾಧ್ಯಾಪಕರಾಗಿ" ಹಾಗೂ 'ಪ್ರಾಧಿಸ್ಟಿಕೆಗೆ' ಪತ್ರಗಳನ್ನು ಹೊರತಂದರು. ಕರ್ನಾಟಕ ಸಂಗೀತದ "ಮದ್ರಾಸ್ ಮ್ಯೂಜಿಕ್ ಅಕಾಡೆಮಿ"ಯಲ್ಲಿ ವಾರ್ಷಿಕ ಸಭೆ ಸೊಸೈಟಿಯ "Ethnomusicology"ಯನ್ನು ಯು.ಎಸ್. ಮತ್ತು ಭಾರತದಲ್ಲಿ ಮಾಡಿದರು.

"1960ರಲ್ಲಿ ಭಾರತೀಯ ಸಂಗೀತ ದರ್ಶನ" ಪುಸ್ತಕ ಬರೆದರು. ಅದು ಈಗ ಮರುಮುದ್ರಣ ಪಡೆಯುತ್ತಿದೆ.

ಗಾಯುತ್ರಿ ಅವರ ಹೊಸ ಪ್ರಕಟಣೆಗಳು. "Improvisation in Alapana Performance"

A Comparative view of Raga Shankarabharana. In year Book for traditional music 19:45-64 New York, Columbia University Press. Regional Music Traditions of Karnataka, Raga In Southern Areas of India.

In the Garland Encyclopedia of World Music and Reviews in the Scholarly Journal Ethnomusicology Awards Include Scholarship form Government of Mysore and Central Government, National Endowment for the Humanities (U.S.A.) and the American Institute of Indian. Studies. ಪ್ರಶಸ್ತಿಗಳು ಬಂದಿವೆ.

ಛಾಯಾಭಗವಾನ್

## ಅವರಿಗೆ ಸಂದ ಪ್ರಶಸ್ತಿಗಳು

1. ಕರ್ನಾಟಕ ಗಾನಕಲಾ ಪರಿಷತ್ತಿನಿಂದ 2010ರಲ್ಲಿ "ಕಲಾಸೇವೆ" ಸನ್ಮಾನ ಪ್ರಶಸ್ತಿ.
2. ತ್ಯಾಗರಾಜ ಗಾನಬ್ರಹ್ಮಸಭೆ ಆರಾಧನಾ ಸಮಿತಿಯಿಂದ ಸನ್ಮಾನ ಪ್ರಶಸ್ತಿ.
3. ಚಿಂತನಪಲ್ಲಿ "ಪರಂಪರಾಟ್ರಸ್ಟ್"ನಿಂದ "ಸಂಗೀತ ಪರಂಪರಾನಿಧಿ" ಸನ್ಮಾನ ಪ್ರಶಸ್ತಿ.
4. ಶ್ರೀರಂಗಪಟ್ಟಣದಲ್ಲಿ ತ್ಯಾಗರಾಜ ಉತ್ಸವದಲ್ಲಿ ಸನ್ಮಾನ ಮಾಡಿದ್ದಾರೆ.

ಅಲ್ಲದೇ "ಅಮೆರಿಕನ್ ಇನ್ಸಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್" ಸಂಸ್ಥೆಯಿಂದ "ಫೆಲೋಷಿಪ್" ಮತ್ತು ಕರ್ನಾಟಕ ಸರ್ಕಾರದ "ಸ್ಕಾಲರ್‌ಶಿಪ್"ನ್ನು ಮದ್ರಾಸಿನಲ್ಲಿ ಓದಲು ಒದಗಿಸಿದರು.


ಇಂತಹ ಒಬ್ಬ ಮಹಿಳಾ "ಸಂಗೀತ ವಿದ್ವಾನ್" ನಮ್ಮ ಬೃಹಚ್ಚರಣ ಪಂಗಡದಲ್ಲಿ ಹುಟ್ಟಿ, ಬೆಳೆದು ಸಂಗೀತ ಮತ್ತು ಗೋಟುವಾದ್ಯದಲ್ಲಿ ಅಪಾರ ಸಾಧನೆ ಗಳಿಸಿರುವುದು, ನಮಗೆಲ್ಲಾ ಬಹಳ ಹೆಮ್ಮೆಯ ವಿಷಯವಾಗಿದೆ.





ನಮ್ಮ ಸಂಘದ ಸದಸ್ಯರಾದ, ಸಂಗೀತ ವಿದೂಷಿ ಡಾ. ಗಾಯತ್ರಿ ರಾಜಾಪುರ ಕಾಸಬಾಂರವರ **"ಭಾರತೀಯ ಸಂಗೀತ ದರ್ಶನ"** ಎಂಬ ಪರಿಷ್ಕೃತ ಆವೃತ್ತಿಯ. ಪುಸ್ತಕದ ಬಿಡುಗಡೆ ದಿನಾಂಕ ೨೨-೨-೧೨ರಂದು ಪದ್ಮಭೂಷಣ ಶ್ರೀ ಆರ್.. ಕೆ. ಶ್ರೀಕಂಠನ್ ಮಾಡಿದರು. ಪ್ರೊ. ಡಾ. ರಾ. ವಿಶ್ವೇಶ್ವರನ್ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ಕಲಿಯುವವರು, ಬಲ್ಲವರ ಮನೆಗಳಲ್ಲಿ ಈ ಪುಸ್ತಕ ಮಾರ್ಗದರ್ಶನ ನೀಡುವ ದೀಪವಾಗಿರುತ್ತದೆ. (ಬೆಲೆ. ರೂ. ೨೫೦/–) ಸಂಘವು ಡಾ. ಗಾಯತ್ರಿಯವರಿಂದ ಇನ್ನೂ ಉಪಯುಕ್ತ ಪುಸ್ತಕಗಳು ಬರಲೆಂದು ಆಶಿಸುತ್ತಾ ಶುಭಕೋರುತ್ತದೆ.

# ಸಂಧ್ಯಾವಂದನೆ



ಸಂಧ್ಯಾವಂದನೆಯು ವಿಪ್ರರ ನಿತ್ಯ ಕರ್ಮಗಳಲ್ಲಿ ಬಹುಮುಖ್ಯವಾದುದು. ಸಂಧ್ಯಾವಂದನೆಯ ಪ್ರಾಮುಖ್ಯತೆಯನ್ನು ಶೃಂಗೇರಿ ಜಗದ್ಗುರು ಪೂಜ್ಯ ಚಂದ್ರಶೇಖರ ಭಾರತಿ ಸ್ವಾಮಿಗಳು ಹೀಗೆ ತಿಳಿಸಿದ್ದಾರೆ:

**ವಿಪ್ರೋ ವೃಕ್ಷ: ತಸ್ಯ ಮೂಲಂ ಹಿ ಸಂಧ್ಯಾ**
**ವೇದಾಃ ಶಾಖಾಃ ಸರ್ವ ಕರ್ಮಾಣಿ ಪತ್ರಮ್ ।**
**ತಸ್ಮಾನ್ಮೂಲಂ ಸರ್ವಯತ್ನೇನ ರಕ್ಷೇತ್**
**ಮೂಲೇ ನಷ್ಟೇ ನೈವ ಶಾಖಾ ನ ಪತ್ರಮ್ ॥**

ಅಂದರೆ ಬ್ರಾಹ್ಮಣನೇ ವೃಕ್ಷವು. ಸಂಧ್ಯಾ ವಂದನೆಯೇ ಅದರ ಬೇರು. ವೇದಗಳೇ ರೆಂಬೆಗಳು ಶಾಸ್ತ್ರ ವಿಹಿತ ಕರ್ಮಗಳೇ ಎಲೆಗಳು. ವೃಕ್ಷವು ಸಂವೃದ್ಧವಾಗಿ ಬೆಳೆದು ಫಲವನ್ನು ಕೊಡಬೇಕಾದ ಅದರ ಬೇರನ್ನು ಸಕಲ ಪ್ರಯತ್ನಗಳಿಂದಲೂ ರಕ್ಷಿಸಿಕೊಳ್ಳಬೇಕು. ಬೇರು ನಷ್ಟವಾದರೆ ರೆಂಬೆಗಳಲ್ಲಿ, ಎಲೆಗಳಲ್ಲಿ, ಫಲದ ಆಸೆಯಾದರೂ ಎಲ್ಲಿಯದು?

ಗಾಯತ್ರಿಯ ಮಹಿಮೆಯನ್ನು ಋಷಿಮುನಿಗಳೂ, ಮಹಾತ್ಮರೂ, ಶಾಸ್ತ್ರ ಗ್ರಂಥಗಳೂ ಬಹಳವಾಗಿ ಕೊಂಡಾಡಿವೆ. ರಾಮಾಯಣ ಮತ್ತು ಮಹಾಭಾರತ ಗಳಲ್ಲಿಯೂ ಸಹಾ ಸಂಧ್ಯಾವಂದನೆಯ ಉಲ್ಲೇಖವಿದೆ.

ಸಂಧ್ಯಾವಂದನೆಯ ಬಗ್ಗೆ ಮನುವು ಹೇಳುವುದೆಂದರೆ 'ನಿಯಮದಿಂದ ಮೂರು ವರ್ಷಗಳವರೆಗೆ ಗಾಯತ್ರಿಯನ್ನು ಜಪಿಸುವಾತನು ಜಗತ್ಪ್ರಭುವಾದ ಈಶ್ವರನನ್ನು ಸೇರುತ್ತಾನೆ. ದ್ವಿಸಂಧ್ಯೆಯಲ್ಲಿ ಗಾಯತ್ರಿಯನ್ನು ಜಪಿಸುವವನು ವೇದಾಧ್ಯಯನದ ಪುಣ್ಯ ಫಲವನ್ನು ಹೊಂದುತ್ತಾನೆ. ಕೇವಲ ಜಪಸಾಧನೆ ಯಿಂದಲೇ ಅವನು ಸಿದ್ಧಿಯನ್ನು ಪಡೆಯುತ್ತಾನೆ. ಪ್ರತಿದಿನವೂ 1000 ಸಲ ಗಾಯತ್ರಿಯನ್ನು ಜಪಿಸುವುದರಿಂದ ಸರ್ಪವು ತನ್ನ ಪೊರೆಯಿಂದ ಬಿಡಲ್ಪಡುವಂತೆ ಪಾಪಗಳಿಂದ ಬಿಡಲ್ಪಡುತ್ತಾನೆ."

ಅಂತೆಯೇ ಸಂಧ್ಯಾವಂದನೆಯನ್ನು ಮಾಡದವನು ಯಾವ ಶಾಸ್ತ್ರೀಯ ಕರ್ಮಾನುಷ್ಠಾನಕ್ಕೂ ಯೋಗ್ಯನಲ್ಲವೆಂದು ಶಾಸ್ತ್ರವು ಹೇಳುತ್ತದೆ:

**ಸಂಧ್ಯಾ ಹೀನೋ ಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।**
**ಯದ್ಯದಿಕುರುತೇ ಕರ್ಮನ ತಸ್ಯ ಫಲಭಾಗ್ಭವೇತ್ ॥**

ಸಂಧ್ಯಾವಂದನೆಯಲ್ಲಿ ಆಚಮನ, ಅರ್ಘ್ಯಪ್ರದಾನ, ಗಾಯತ್ರಿ ಜಪ ಮತ್ತು ಸೂರ್ಯೋಪಸ್ಥಾನ ಪ್ರಧಾನವಾಗಿದೆ. ಆಚಮನ, ಮಾರ್ಜನ ಮಂತ್ರಗಳಿಂದ ಅಂತರಂಗ ಬಹಿರಂಗ ಶುದ್ಧಿಯನ್ನು ಪಡೆದು ಪ್ರತ್ಯಕ್ಷ ಬ್ರಹ್ಮದೇವನಾಗಿರುವ ಸೂರ್ಯದೇವನಿಗೆ ಅರ್ಘಪ್ರಧಾನ ಮಾಡಬೇಕು. ಬಳಿಕ ಗಾಯತ್ರಿಯನ್ನು ಅವಾಹಿಸಿ ಧ್ಯಾನ ಮಾಡಿ, ಗಾಯತ್ರಿ ಜಪವನ್ನು ಮಾಡಬೇಕು. ನಂತರ ಸೂರ್ಯದೇವನನ್ನು ಪ್ರಾರ್ಥಿಸಿ, ದಿಗ್ದೇವತೆಗಳಿಗೆ ನಮಸ್ಕರಿಸಬೇಕು. ಬಳಿಕ ಋಷಿಮುನಿವರರೂ ಮಾತಾಪಿತೃಗಳನ್ನು ಸ್ಮರಿಸಿಕೊಂಡು ಅದುವರೆಗೆ ಮಾಡಿದ ಎಲ್ಲಾ ಕರ್ಮಗಳನ್ನು ಭಗವಂತನಿಗೆ ಅರ್ಪಿಸಬೇಕು. ಇದೇ ಸಂಧ್ಯಾನುಷ್ಠಾನದ ಮುಖ್ಯ ತಾತ್ಪರ್ಯ.

ನಮ್ಮ ಶರೀರದ ಆರೋಗ್ಯಕ್ಕೆ ಪೌಷ್ಠಿಕ ಆಹಾರ ಮತ್ತು ವ್ಯಾಯಾಮಗಳು ಹೇಗೆ ಮುಖ್ಯವೋ ಹಾಗೆಯೇ ಮನಸ್ಸಿನ ಪರಿಶುದ್ಧಿ ಮತ್ತು ದೃಢತೆಗೆ ಸಂಸ್ಕಾರಗಳು ಅತ್ಯಾವಶ್ಯಕ. ಸಂಧ್ಯಾವಂದನೆ ಈ ಸಂಸ್ಕಾರಗಳಲ್ಲಿ ಬಹುಮುಖ್ಯವಾದುದು. ಅಲ್ಲದೆ ಸಂಧ್ಯಾವಂದನೆಯಿಂದ ದೀರ್ಘಾಯಸ್ಸು, ದೇಹಾರೋಗ್ಯ, ಶ್ರೇಯಾಭಿವೃದ್ಧಿ ಮತ್ತು ಜ್ಞಾನ ಸಂಪಾದನೆ ಉಂಟಾಗುವು ದರಿಂದ, ಈ ಶ್ರೇಷ್ಠವಾದ ನಿತ್ಯ ಕರ್ಮವನ್ನು ತಪ್ಪದೇ ಮಾಡುವುದು ಅತ್ಯಗತ್ಯ ಸಮಯದ ಅಭಾವದ ನೆಪವೊಡ್ಡಿ ಸಂಧ್ಯಾವಂದನೆಯನ್ನು ಕೆಲವು ವಿಪ್ರರು ಮಾಡುತಿಲ್ಲ. ಇನ್ನು ಮೇಲಾದರೂ ಇದುವೇ 2012ರ ಸಂಕಲ್ಪವೆಂದು ಭಾವಿಸಿ ಸಂಧ್ಯಾವಂದನೆಯನ್ನು ತಪ್ಪದೇ ಮಾಡಬೇಕೆಂಬುದು ನಮ್ಮ ಆಸೆ.

**ಸ್ವಸ್ತಿ ಪ್ರಜಾಭ್ಯಾ ಪರಿಪಾಲಯಂ ತಾಂ ।**
**ನ್ಯಾಯೇನ ಮಾರ್ಗೇಣ ಮಹಿಂ ಮಹೀಶಾಃ ॥**
**ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ।**
**ಲೋಕಾ ಸಮಸ್ತಾ ಸ್ಸುಖಿನೋಭವಂತು ॥**

**■ ಅರೇಹಳ್ಳಿ. ಎಸ್. ಗೋವಿಂದರಾಜನ್**

ವಿ.ಸೂ. : ಆಧುನಿಕ ಜೀವನಶೈಲಿಯಿಂದಾಗುವ ಮನಃ ಕ್ಲೇಶ ಮತ್ತು ಇತರ ಡಿಸ್ ಆರ್ಡರ್‌ಗಳಿಗೆ ಪುರಾತನ ರಾಮಬಾಣ ಸಂಧ್ಯಾವಂದನೆ ಎಂದರೆ ತಪ್ಪಾಗಲಾರದು.

## ರಸ ಬಿಂದು

- ತನಗಾಗಿ ಸುಖವನ್ನು ಬಯಸುವುದು ಅಲ್ಪಸುಖ. ಬೇರೆಯವರಿಗಾಗಿ ಸುಖವನ್ನು ನೀಡುವುದು ಶಾಶ್ವತವಾದ ಸುಖ.
- ಒಳ್ಳೆಯತನದ ಅಭಿಮಾನವು ಕೆಡುಕಿನ ಮೂಲ.
- ಜ್ಞಾನವು ಮುಕ್ತಿಯ ಸೋಪಾನ, ಆದರೆ ಜ್ಞಾನದ ಅಭಿಮಾನವು ನರಕಕ್ಕೆ ಕೊಂಡು ಹೋಗುತ್ತದೆ.
- ಸ್ವಾರ್ಥ ಹಾಗೂ ಅಭಿಮಾನವಿರುವ ತನಕ ಯಾರಲ್ಲಿಯೂ ಪ್ರೇಮ ಉಂಟಾಗಲಾರದು.
- ನಾನೆಂಬುದೇ ಇಡೀ ಪ್ರಪಂಚದ ಬೀಜವಾಗಿದೆ.
- ಸ್ವಭಾವ ಶುದ್ಧವಾಗುವುದೇ ನಿಜವಾದ ಉನ್ನತಿ.
- ಅಯೋಗ್ಯ ಅಥವಾ ಸೋಮಾರಿ, ಮೂರ್ಖ, ದಡ್ಡ, ತನ್ನ ನಿಜವಾದ ಉನ್ನತಿಯನ್ನು ಮಾಡಿಕೊಳ್ಳಲಾರ.

**■ ಪ್ರಕೃತಿ ಎ.**
ರಾಜಾಜಿನಗರ

# ಶ್ರೀಮತಿ ಭ್ರಮರಾ ಗೋಪಿನಾಥ್

ವ್ಯಾವಹಾರಿಕ ಜೀವನದಲ್ಲಿ ಮುಳುಗಿ ಹೋಗಿರುವ ಇಂದಿನ ಜನಾಂಗಕ್ಕೆ ಮುಕ್ತಿಪಥದ ಸಾಧನೆಗೆ ಸುಲಭವಾದ ಭಕ್ತಿಪಥದ ಮೂಲಕ ದಾರಿ ತೋರಿಸುತ್ತಿರುವ ನಮ್ಮ ಬೃಹಚ್ಚರಣ ಸಮುದಾಯದ ಹಿರಿಯ ಚೇತನಗಳಲ್ಲಿ ಒಬ್ಬರು ಭ್ರಮರಾ ಗೋಪಿನಾಥ್.

ಸಂಸ್ಕಾರವಂತ ಕುಟುಂಬದಲ್ಲಿ ಜನಿಸಿದ ಇವರು ಕಿರಿಯ ಪ್ರಾಯದಿಂದಲೇ ಸಂಗೀತಾಸಕ್ತರು. ಇದಕ್ಕೆ ಮೂಲಕಾರಣ ಇವರ ತಾಯಿ ಶ್ರೀಮತಿ ಜ್ಞಾನಾಂಬಾಳ್. ಇದಕ್ಕೆ ಪೂರಕವಾಗಿ ಮನೆಯವರ ಪ್ರೋತ್ಸಾಹವು ದೊರೆಯಿತು. ಅಂತೆಯೇ ಇವರು ವೀಣಾವಾದನವನ್ನು ಶ್ರೀ ಎಚ್.ಎಸ್. ಕೃಷ್ಣಮೂರ್ತಿಯವರಲ್ಲಿ ಮಾಡಿದರು. ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತವನ್ನು ಪೂಜ್ಯಶ್ರೀ ಶೇಷಾದ್ರಿ ಗವಾಯಿಯವರಲ್ಲಿ ಮಾಡಿದರು. ಆರಂಭದಿಂದಲೂ ಇವರಿಗಿದ್ದ ಆಧ್ಯಾತ್ಮಿಕ ಒಲವು ಇವರು ಸದ್ಗುರು ಭದ್ರಗಿರಿ ಕೇಶವದಾಸರ ಹರಿಕಥೆ ಕೇಳಿದಾಗ ಬಲಗೊಂಡಿತು. ಸದ್ಗುರುಗಳಿಂದ ಮಂತ್ರೋಪದೇಶ ಪಡೆದು 'ಕೇಶವ ಭಗಿನಿ' ಎಂಬ ನಾಮಾಂಕಿತದಿಂದ ಅನೇಕ ಭಜನೆಗಳನ್ನು ರಚಿಸಿದ್ದಾರೆ. ಸದ್ಗುರು ಭದ್ರಗಿರಿ ಅಚ್ಯುತದಾಸರ ಆಶೀರ್ವಾದದಿಂದ ಸತ್ಸಂಗದ ಮೂಲಕ ಭಜನೆ, ಹರಿಕಥೆ, ಪ್ರವಚನ ಮಾಲಿಕೆಯ ಮೂಲಕ ಜನಸಾಮಾನ್ಯರಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ದಾರಿ ದೀಪವಾಗಿದ್ದಾರೆ. ಇವರು ತಮ್ಮ ಸಂಗೀತ ಕಲೆಯನ್ನು ತಮ್ಮ ಪ್ರವಚನ ಹರಿಕಥೆಗಳಲ್ಲಿ ಸೂಕ್ತವಾಗಿ ಬಳಸಿ ಜನರಂಜಕವಾಗಿ ಮಾಡುತ್ತಾರೆ. ಹಾಗೆಯೇ ಕೇಳುಗರನ್ನು ಭಜನೆಯಲ್ಲಿ ಭಾಗವಹಿಸುವಂತೆ ಮಾಡಿ ಪ್ರವಚನಗಳನ್ನು ಉತ್ಸಾಹ ಭರಿತರಾಗಿ ಆಲಿಸುವಂತೆ ಮಾಡುತ್ತಾರೆ.

ಇಂದಿಗೂ ಇವರು ನೂರಾರು ವಿದ್ಯಾರ್ಥಿಗಳಿಗೆ ಹಿಂದುಸ್ಥಾನಿ, ಕರ್ನಾಟಕ ಶಾಸ್ತ್ರೀಯ ಗಾಯನ ಹಾಗೂ ವೀಣಾವಾದನದ ತರಗತಿ ನಡೆಸುತ್ತಿದ್ದಾರೆ.

ಇವರು ಬೆಂಗಳೂರಿನ ಅನೇಕ ದೇವಾಲಯಗಳು, ಸಭೆಗಳಲ್ಲಿ ಮಹಾಭಾರತ, ರಾಮಾಯಣ, ಭಾಗವತ, ಭಾಗವದ್ಗೀತೆ, ಅನೇಕ ಭಕ್ತರ ಹರಿಕಥೆಗಳನ್ನು ಮಾಡಿದ್ದಾರೆ. ಸತತವಾಗಿ 10 ವರ್ಷಗಳಿಂದ ಶ್ರೀನಗರದ ಶ್ರೀನಿವಾಸ ದೇವಸ್ಥಾನದಲ್ಲಿ ಧನುರ್ಮಾಸದಲ್ಲಿ ತಿರುಪ್ಪಾವೈ ಪ್ರವಚನ ಮಾಡುತ್ತಿದ್ದಾರೆ. ಇದಕ್ಕಾಗಿ ಇವರಿಗೆ 'ಜ್ಞಾನಧಾತ್ರಿ' ಎಂದು ಬಿರುದು ಕೊಟ್ಟಿದ್ದಾರೆ.

ಈ ವರ್ಷ ಬನಶಂಕರಿ ಸಾಂಸ್ಕೃತಿಕ ಸಂಘದಿಂದ 2011ನೇ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಸನ್ಮಾನಿಸಿದ್ದಾರೆ.

ಇದಕ್ಕೆಲ್ಲಾ ಪ್ರೋತ್ಸಾಹ ಕೊಡುತ್ತಿರುವವರು ಇವರ ಪತಿ ಶ್ರೀ ಆರ್.ವಿ. ಗೋಪಿನಾಥ್‌ರವರು. ಇವರು ಸ್ವತಃ ಗಮಕ ಕಲಾವಿದರು. ಆಕಾಶವಾಣಿಯಲ್ಲಿ ಇವರ ಅನೇಕ ಗಮನ ವಾಚನ ಕಾರ್ಯಕ್ರಮಗಳು ಪ್ರಸಾರವಾಗಿದೆ. ಇವರು ಎಚ್.ಎ.ಎಲ್.ನಿಂದ ನಿವೃತ್ತರಾಗಿ ಪತ್ನಿಯೊಂದಿಗೆ ಇಂದು ತೃಪ್ತಜೀವನ ನಡೆಸುತ್ತಿದ್ದಾರೆ. ಹೆಸರಿಗೆ ತಕ್ಕಂತೆ ಇರುವ ಇವರ ಕುಟೀರ 'ಸದ್ಯೋಜಾತ'ಕ್ಕೆ ತೆರಳಿದಾಗ ಭಕ್ತಿಯ ಲಹರಿಯ ಅನುಭವವಾಗುತ್ತದೆ.

■ ಅಚಲಾ ರಮೇಶ್

## ಪದಬಂದು - 4


**ಎಡದಿಂದ ಬಲಕ್ಕೆ**

1. ಅನವಶ್ಯಕವಾಗಿ ಸಹಾಯ - 3
2. ತಲೆಬಾಚು - 2
3. ಒದೆಯುವ ಪ್ರಾಣಿ - 3
4. ಪಲಾವ್‌ಜತೆ ಮೇಲೋಗರ - 3
5. ಆಟಗಾರ - ಇಂಗ್ಲಿಷ್ - 3
7. ಹಕ್ಕಿಯ ಪುಕ್ಕ - 2
8. ಮುಖದಲ್ಲಿರುವ ಒಂದು ಅಂಗ - 2
9. ತಿನ್ನುವ ಒಂದು ತರತೀಪು - 3
11. ಎಣ್ಣೆಯಲ್ಲಿ ಕರಿದ ತಿಂಡಿ ಹಿಂದಾಮುಂದಾ ಆಗಿದೆ - 4
14. ಸಗಣಿಯಿಂದ ಸಾರಿಸು - 3

**ಮೇಲಿನಿಂದ ಕೆಳಕ್ಕೆ**

1. ಸಾಕಾಗುವುದಿಲ್ಲ - 3
2. ತಗ್ಗಾದ ರಸ್ತೆ - 3
3. ಒಗ್ಗರಣೆಗೆ ಹಾಕುವ ಎಲೆ - 3
4. ಹೂ ಕೀಳಬೇಡ - 4
6. ಒಂದು ರೀತಿಯ ವ್ಯಂಗ್ಯ - 4
8. ಮಾತಾಡು - 3
10. ನಟನೆಯ ಮಡಿ - 4
12. ವಯಸ್ಸಾನವ್ಯಕ್ತಿ - 3
13. ಕುವೆಂಪು ಮನೆ ಇರುವ ಹಳ್ಳಿ - 3
15. ಕೇಡು - 3

**ಪದಬಂಧ-4ರ ಸರಿಯುತ್ತರಗಳನ್ನು ನಿಮ್ಮ ಹೆಸರಿನೊಂದಿಗೆ 25-5-2012ರೊಳಗೆ ಕಳಿಸಿದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**



**ಪದಬಂದು-3ರ ಉತ್ತರ**

**ಎಡತಟ್ಟೆ ಬಲತಟ್ಟು**

1.ವಾರಡಕು, 3. ಗಣಪ, 5. ಕೊಳಗ, 6. ಜಿರಳೆ, 7. ಪುಡಿಚಿಕೊ, 11. ಅಳಚಿ, 13. ಬುರುಗಲು, 16. ಮಾಣಿಕಂ, 17. ತೀಸ್ಲು.

**ಮೇಲಿ ಅನ್ನು ಕೀಳ್ಕು**

1. ವಾರಾದ್ದುಡಿ, 2. ಕುಳ್ರುಕೊದಿಪು, 3. ಗಜಿಬಿಜಿ, 4. ಪಡಕಲೆ, 8. ಡಿಕ್ಕಿ, 9. ಕೊಳಂಬು, 10. ಕಲವು, 11. ಅಲಮಾರು, 12. ಚಿಣಕಂಡು, 14. ರುಕ್ಕಮ್ಮ, 15. ಪಸ್ಲು, 17. ತೀರು.

## 'ಬೃಹಚ್ಚರಣ'

ಒಂದು ಗ್ರಾಮದ ಹೆಸರಾದ ಮಾಂಜಿ ಪುದೂರು 'ಮಂಜ-ಪುತ್ತೂರು' ಎಂದು ಅಪಭ್ರಂಶ ವಾಗಿರುವಂತೆ ತೋರುತ್ತದೆ. ಮಾಂಜಿಪುದೂರು (ನಮ್ಮ ಪೂರ್ವಿಕರ ಸ್ಥಳ) ಇರುವುದು ತಂಜಾವೂರು ಜಿಲ್ಲೆಯಲ್ಲಿ, ತಂಜಾವೂರು-ನಾಗಪಟ್ಟಣ ಮಾರ್ಗದಲ್ಲಿರುವ ಸಣ್ಣ ಗ್ರಾಮ. ಈ ಗ್ರಾಮಕ್ಕೆ ಸೇರಿದ ಬೃಹಚ್ಚರಣ ಪಂಗಡವೇ ಇಂದಿನ ಕರ್ನಾಟಕದ 'ಮಂಜ ಪುತ್ತೂರು' ಶಾಖೆಯವರು. 'ಪುದೂರು' ಎಂದರೆ ಹೊಸದಾಗಿ ನಿರ್ಮಿಸಲಾದ ಊರು. ಹಿಂದಿನ ಕಾಲದ ತಮಿಳುನಾಡಿನಲ್ಲಿ ಚೋಳ ಪಾಂಡ್ಯ ಅರಸರು ಸಾವಿರಾರು 'ಚತುರ್ವೇದಿ ಮಂಗಲ'ಗಳನ್ನು ಕಟ್ಟಿ ಬ್ರಾಹ್ಮಣರಿಗೆ ದಾನ ಮಾಡಿದರು. ಜನದ ಬಾಯಲ್ಲಿ ಇಂಥ ಗ್ರಾಮ 'ಪುದೂರು' ಎಂದು ನುಡಿಯಿತು. ಮಾಂಜಿ ಪುದೂರು ಹೀಗೆ ನಮ್ಮ ಪೂರ್ವಿಕರ ವಶಕ್ಕೆ ಬಂದಿರಬೇಕು.

**ಬಿ.ಜಿ.ಎಲ್.ಸ್ವಾಮಿ** (ಡಿ.ವಿ.ಜಿ. ಕೃತಿ ಶ್ರೇಣಿ 8-ಬಿನ್ನಹ)

## ನೆಮ್ಮದಿಯ ಜೀವನಕ್ಕೆ ಡಿ.ವಿ.ಜಿ.ಯವರ ಸೂತ್ರಗಳು

### ದ್ರಾವಿಡ ಜನಾಂಗ

ದ್ರಾವಿಡ ಬ್ರಾಹ್ಮಣ ವರ್ಗದಲ್ಲಿ ಅನೇಕ ಪಂಗಡಗಳುಂಟು: ವಡಮ, ವಾಧ್ಯಮ, ಅಷ್ಟಸಹಸ್ರ, ಬೃಹಚ್ಚರಣ, ಇತ್ಯಾದಿ. ಬೃಹಚ್ಚರಣ ಎಂಬುದರಲ್ಲಿ ಒಳಪಂಗಡಗಳುಂಟು: ಕಂಡ್ರ ಮಾಣಿಕ್ಯ, ಪಳಮಾನೂರು, ಅರವದಳ, ಮೊಳನಾಡು, ಮಂಜಾಪುತ್ತೂರು, ತಿರುವಣ್ಣಾಮಲೈ ಬೃಹಚ್ಚರಣರು ಇತ್ಯಾದಿ. ಸರ್.ಕೆ. ಶೇಷಾದ್ರಿ ಅಯ್ಯರ್‌ರವರು ಕಂಡ್ರ ಮಾಣಿಕ್ಯ. ಕಂಡ್ರಮಾಣಿಕ್ಯ ಎಂಬುದು ಒಂದು ಅಗ್ರಹಾರ. 'ವೇದಾಂತ ಪರಿಭಾಷಾ' ಎಂಬ ಪ್ರಸಿದ್ಧ ಗ್ರಂಥವನ್ನು ಬರೆದ ಧರ್ಮರಾಜಾಧ್ವರಿ ಎಂಬ ಮಹಾವಿದ್ವಾಂಸನು ಕಂಡ್ರ ಮಾಣಿಕ್ಯದವನು. ಮೈಸೂರಿನ ಚೀಫ್ ಜಸ್ಟಿಸ್ ಆಗಿದ್ದ ಚಂದ್ರಶೇಖರ್ ಅಯ್ಯರ್‌ರವರು ಪಳಮಾನೂರು ಬೃಹಚ್ಚರಣರು. ಸರ್ ಪಿ.ಎಸ್. ಶಿವಸ್ವಾಮಯ್ಯರು ಮೊಳನಾಡು. ನಾವು ಮಂಜಾಪುತ್ತೂರು ಬೃಹಚ್ಚರಣರು.

### ಮಂಜಾಪುತ್ತೂರು

"ಮಂಜಾ" ಎಂದ ಪದ "ಮುಂಜಾ" ಎಂಬ ಸಂಸ್ಕೃತ ಮಾತಿಗೆ ಸಂಬಂಧಪಟ್ಟದ್ದಂತೆ. ಅದರಿಂದಲೇ ಕನ್ನಡದ "ಮುಂಜಿ" ಬಂದಿರುವುದು. "ಮುಂಜಾ" ಎಂಬುದು ಒಂದು ಬಗೆಯ ದರ್ಭೆಹುಲ್ಲು. ಅದರಿಂದಲೇ "ಮೌಂಜೀ." ಇದು ಉಪನಯನದ ಕಾಲದಲ್ಲಿ ವಟುವಿಗೆ ಸುತ್ತಿಸುವ ಉಡುದಾರ-ಮೇಖಲಾ. ಅತಿ ಪುರಾತನ ಕಾಲದಲ್ಲಿ ಈ ಮೌಂಜೀ ಸಂಸ್ಕಾರವು ಹೆಣ್ಣುಮಕ್ಕಳಿಗೆ ಕೂಡ ವಿಹಿತವಾಗಿತ್ತಂತೆ. ಏವಂಚ, ಮಂಜಾಪುತ್ತೂರು ವೈದಿಕ ಕರ್ಮಗಳಿಗೆ, ವಿಶೇಷವಾಗಿ ದರ್ಭೆಗೆ ಸಂಬಂಧಪಟ್ಟಿದ್ದವರ ಗ್ರಾಮ. ಯಾವ ಊರಿನಲ್ಲಿ "ಮುಂಜಾ" ಹುಲ್ಲೂ "ಪುತ್ತೂ" ಎಂದರೆ ಹುತ್ತಗಳೂ ಇದ್ದವೋ ಅದು ಮಂಜಾಪುತ್ತೂರು. ಮಂಜಾಪುತ್ತೂರು ಗ್ರಾಮ ಈಗಲೂ ಇದೆ-ತಿರುಚಿನಾಪಲ್ಲಿಯಿಂದ ಆಚೆಗೆ : ತಿರುಚಿನಾಪಲ್ಲಿಗೂ ಸಿದ್ಧರ್‌ಕೋಯಿಲ್ ಎಂಬ ಊರಿಗೂ ನಡುವೆ. ಪೂರ್ವ ಕಾಲದಲ್ಲಿ ಅದು ವೈದಿಕ ಬ್ರಾಹ್ಮಣರ ಅಗ್ರಹಾರ. ಈಗ ಸುಮಾರು ನಲವತ್ತೈದು ಮನೆಗಳಿರುವ ಹಳ್ಳಿ.

ಅಲ್ಲಿದ್ದ ವೈದಿಕ ಬ್ರಾಹ್ಮಣರು ಜೀವನೋಪಾಯ ಹುಡುಕುವುದರಲ್ಲಿ ಊರು ಬಿಟ್ಟರು. ಬೃಹಚ್ಚರಣದವರನ್ನು "ಬೃಹದಾಚರಣರು" ಎಂದು ಕರೆಯುತ್ತಿದ್ದರಂತೆ. ಬೃಹದಾಚರಣ ಎಂದರೆ ದೊಡ್ಡ ದೊಡ್ಡ ಆಚಾರಗಳುಳ್ಳವರು ಎಂದರ್ಥ: ಕರ್ಮನಿಷ್ಠರು, ಯಜ್ಞಯಾಗಾದಿ ಕರ್ಮಶ್ರದ್ಧೆಯುಳ್ಳವರು. ಅವರಲ್ಲಿ ಕೆಲವರು ವೇದದಲ್ಲಿಯೂ ಮೀಮಾಂಸಾದಿ ಶಾಸ್ತ್ರಗಳಲ್ಲಿಯೂ ಪಾರಂಗತರಾಗಿದ್ದವರು; ಗ್ರಂಥಗಳನ್ನು ಬರೆದವರು.

### ಜೀವನಾರ್ಥ

ಸುಮಾರು ಆರುನೂರು ವರ್ಷಗಳ ಹಿಂದೆ, ಬಹುಶಃ ಕ್ರಿ.ಶ ಹದಿನಾಲ್ಕನೆಯ ಶತಮಾನದ ಸುಮಾರಿನಲ್ಲಿ-ನನ್ನ ಪೂರ್ವಿಕರು ಮೈಸೂರು ಸೀಮೆಗೆ ಬಂದಿರಬೇಕು. ಅವರು ಜೀವನಾರ್ಥಿಗಳಾಗಿಯೇ ಬಂದರೆಂದು ನನ್ನ ಊಹೆ. ಅದು ವಿಜಯನಗರ ಸ್ಥಾಪನೆಯಾದ ತರುವಾಯದ ಕಾಲ. ಆ ಕಾಲದಲ್ಲಿ ಭೂಸ್ವತ್ತಿಲ್ಲದ ಬ್ರಾಹ್ಮಣಜನ ಇಲ್ಲಿಗಲ್ಲಿಗೆ ಅಲೆದಾಡುತ್ತಿದ್ದರೆಂದು ತೋರುತ್ತದೆ. ಹಾಗೆ ಒಂದು ಗೊತ್ತಾದ ನೆಲೆಮನೆಯಿಲ್ಲದೆ ಜೀವನೋಪಾಯಕ್ಕಾಗಿ ಅಲೆದಾಡಿದರು. ಅಂಥ ಅಲೆದಾಟಿಗರ ಪಂಗಡಗಳಲ್ಲಿ ಮಂಜಾಪುತ್ತೂರಿನದು ಒಂದು.

ಕೊಯಮತ್ತೂರು ಶಾಲ್ಯದ ಜಿಲ್ಲೆಗಳ ಮಾರ್ಗವಾಗಿ ಮೈಸೂರು ಸೀಮೆಗೆ ಬಂದವರು. ಅವರಲ್ಲಿ ಕೆಲವರು ಬೆಂಗಳೂರು ಜಿಲ್ಲೆಯ ಆನೆಕಲ್ ಸರ್ಜಾಪುರ ಮಾರ್ಗದಲ್ಲಿ ಬಂದವರು. ಕೆಲವರು ಮಾರ್ಗದಲ್ಲಿ ಅಲ್ಲಲ್ಲೇ ನೆಲೆಸಿದರು. ಆನೆಕಲ್ಲಿನ ಸಮೀಪದಲ್ಲಿರುವ ಗುಮ್ಮಳಾಪುರವೆಂಬ ಹಳ್ಳಿ ಅವರು ನೆಲಸಿದ ಸ್ಥಳಗಳಲ್ಲಿ ಒಂದು. ಆ ಕಾಲದಲ್ಲಿ ಗುಮ್ಮಳಾಪುರ ಕನ್ನಡ ವಿದ್ವಾಂಸರಿಗೂ ವೀರಶೈವ ಮತಸ್ಥರಿಗೂ ಒಂದು ಕೇಂದ್ರಸ್ಥಾನವಾಗಿತ್ತೆಂದು ತೋರುತ್ತದೆ. ಆ ಊರಿನ ಸುತ್ತಮುತ್ತ ಅನೇಕ ಪ್ರಾಚೀನ ಶಿವಾಲಯಗಳ ಮತ್ತು ಮಠಗಳ ಅವಶೇಷಗಳು ಉಳಿದುಕೊಂಡಿವೆ. ಈ ಸ್ಥಳದಲ್ಲಿ ಬಾಳಿದ ನನ್ನ ಜಾತಿಯ ಮನುಷ್ಯ ಒಬ್ಬಾತ ವೆಂಕಟಶರ್ಮ ಎಂಬವನು. ಈತ ಕನ್ನಡ ಕವಿ ರುದ್ರ ಭಟ್ಟನ ಜಗನ್ನಾಥವಿಜಯ ಕಾವ್ಯಕ್ಕೆ ವ್ಯಾಖ್ಯಾನ ಬರೆದಿದ್ದಾನೆಂದು ಪ್ರಾಕ್ತನ ವಿಮರ್ಶ ವಿಚಕ್ಷಣ ಮಹಾಮಹೋಪಾಧ್ಯಾಯ ರಾ. ನರಸಿಂಹಾಚಾರ್ಯರು ಒಂದು ಕಡೆ ಹೇಳಿದ್ದಾರೆ.

### ರಕ್ತ ಸಂಬಂಧ

ರಕ್ತ ಸಂಬಂಧವೇ ಮಮತೆ. ಅರ್ಥ ಸಂಬಂಧವನ್ನು ಬಿಟ್ಟು ರಕ್ತ ಸಂಬಂಧವನ್ನು ನಾವು ಈಗ ಕಾಪಾಡಿಕೊಳ್ಳಬೇಕಾದದ್ದು. ಇದಕ್ಕೆ ನನಗೆ ತೋರಿದ ಒಂದೆರಡು ಹಿತಸೂಚನೆಗಳನ್ನು ಇಲ್ಲಿ ಬಿನ್ನಯಿಸುತ್ತೇನೆ.

1. ಕುಟುಂಬದಲ್ಲಿ ಯಾರೊಬ್ಬರಾದರೂ ಬೇರೆ ಹೋಗಬೇಕು ಎಂಬ ಉದ್ದೇಶದ ಸೂಚನೆಯನ್ನು ತೋರಿಸಿದ ಕೂಡಲೇ ಆ ಕುಟುಂಬದ ಆಸ್ತಿಪಾಸ್ತಿಗಳನ್ನು ಹಂಚಿಕೆ ಹಾಕಿ ವ್ಯವಸ್ಥೆ ಮಾಡಿಕೊಳ್ಳುವುದು ಉತ್ತಮ ಪಕ್ಷ.
2. ಈ ವಿಭಾಗವ್ಯವಸ್ಥೆಯನ್ನು ಸಕಾಲದಲ್ಲಿ ಮಾಡಿಕೊಳ್ಳದೆ ಮುಂದು ಮುಂದಕ್ಕೆ ತಳ್ಳಿಹಾಕಿ ಮುಜಗರ ಮನಸ್ತಾಪಗಳು ಬೆಳೆಯಲು ಅವಕಾಶ ಕೊಡುವುದು ನ್ಯಾಯವೂ ಅಲ್ಲ, ಸುಖವೂ ಅಲ್ಲ.
3. ವಿಭಾಗವೆಂದರೆ ಬೇರೆ ಬೇರೆ ಒಲೆಗಳನ್ನಿಡಬೇಕು ಎಂಬ ಅರ್ಥಮಾಡುವುದು ಅವಶ್ಯವಲ್ಲ. ಅಡಿಗೆಮನೆ ಒಂದೇ ಇರಬಹುದು. ಆದರೆ ಆಸ್ತಿ ಯಾರು ಯಾರದು ಎಷ್ಟೆಷ್ಟೆಂಬುದು ತಿಳಿದಿದ್ದರೆ ಅದರಿಂದ ಎಲ್ಲರಿಗೂ ಮನಸ್ಸಮಾಧಾನ.

### ಔದಾರ್ಯ

4. ಆಸ್ತಿ ವಿಂಗಡವಾದ ಮೇಲೂ ಕುಟುಂಬದ ನಾನಾ ಭಾಗಗಳು ಒಟ್ಟಿಗೇ ಒಂದೇ ಮನೆಯಲ್ಲಿ ಬಾಳಿಕೊಂಡಿರಬೇಕಾದರೆ ಆ ನಾನಾ ಜನದಲ್ಲಿ ಆತ್ಮಸಂಯಮ ಹೆಚ್ಚಾಗಿರಬೇಕು. ಅಣ್ಣ ಹೆಚ್ಚು ತುಪ್ಪ ತಿಂದರೆ ತಿನ್ನಲಿ. ತಮ್ಮ ನಾಟಕಕ್ಕೆ ಹೋಗುವುದಾದರೆ ಹೋಗಲಿ. ಅವನು ತಿಂದದ್ದೂ ನನ್ನ ಸಂತೋಷವೇ. ಇವನು ನೋಡಿದ್ದೂ ನನ್ನ ಸಂತೋಷವೇ ಎನ್ನುವ ಔದಾರ್ಯ ಇರಬೇಕು. ಈ ಪರಸ್ಪರ ಪ್ರೀತಿಯೂ ಔದಾರ್ಯವೂ ಮನೆಯ ಮುಖ್ಯ ಮುಖ್ಯ ಜನದಲ್ಲಿ ಇಲ್ಲದೆ ಹೋದಾಗ ಆ ಮನೆ ಮನೆಯಲ್ಲ, ಯುದ್ಧರಂಗ.
5. ಈಗ ಇನ್ನೊಂದು ಪ್ರಸಂಗವನ್ನು ನೋಡೋಣ. ಅಣ್ಣತಮ್ಮಂದಿರು 'ಬೇರೆ ಬೇರೆಯಾಗಿ, ಬೇರೆ ಬೇರೆ ಊರುಗಳಲ್ಲಿರುತ್ತಾರೆ. ಅವರವರಿಗೆ ಅರ್ಥದ ಸಂಬಂಧ ನಿಶ್ಶೇಷವಾಗಿರುತ್ತದೆ. ರಕ್ತಸಂಬಂಧ ಮಾತ್ರ ಕೊಂಚ ಕೊಂಚ ಶೇಷ ಉಳಿದುಕೊಂಡಿರುತ್ತದೆ. ಇಂಥವರ ಮಾತೇನು?

### ಗೌರವ

6. ಅಣ್ಣತಮ್ಮಂದಿರುಗಳು ಎಲ್ಲರೂ ತಮ್ಮಲ್ಲಿ ಹಿರಿಯನಾದೊಬ್ಬನನ್ನು ಹಿರಿಯನೆಂದು ಅಂಗೀಕರಿಸಿ ಗೌರವಿಸುವುದು ಎಲ್ಲರಿಗೂ ಕ್ಷೇಮಕರ. ಈ ಕಾಲದ ಜನ ಒಂದು ತತ್ತ್ವವನ್ನು ಮರೆತಿರುವಂತೆ ಕಾಣುತ್ತದೆ. ನಾವು ಯಾರಾದರೂ ಒಬ್ಬಾತನನ್ನು ಗುರುವೆಂದೋ ಹಿರಿಯನೆಂದೋ ಅಂಗೀಕರಿಸಿದಾಗ ಸಂತೋಷವುಂಟಾಗುವುದು ಆತನಿಗೊಬ್ಬನಿಗೆ ಮಾತ್ರವಲ್ಲ; ಆತನಿಗೆ ಸಂತೋಷವಾಗುತ್ತದೋ ಇಲ್ಲವೋ ಅದು ಹೇಗಾದರಿರಲಿ, ಆ ಗುರೂಪಚರಣದಿಂದ ಕಿರಿಯನಿಗೆ ಸಂತೋಷವುಂಟಾಗುತ್ತದೆಂಬುದು ನಿಶ್ಚಯ. ಆದರೆ ಈ ನಿಶ್ಚಯವನ್ನು ಚಿಕ್ಕವಯಸ್ಸಿನವರೂ ಲೋಕಾನುಭವವಿರುವವರೂ

ಒಪ್ಪಿಕೊಳ್ಳಬಹುದು. ನನ್ನ ಅನುಭವದಿಂದ ಹೇಳುವ ಮಾತಿಗೆ ಬೆಲೆಯುಂಟೆಂದರೆ, ನನ್ನ ಅಂತರಂಗವನ್ನು ಬಿಚ್ಚಿ ಹೇಳುತ್ತೇನೆ. ಮನುಷ್ಯ ಬೆಳೆದಂತೆಲ್ಲ, ಲೋಕದ ಕಷ್ಟಗಳನ್ನು ಕಂಡಂತೆಲ್ಲ ಅವನಿಗೆ ಯಾರೊ ಒಬ್ಬ ಗುರು ಇರಬೇಕೆನಿಸುತ್ತದೆ. ಒಬ್ಬ ಹಿರಿಯನು ಬೇಕೆನಿಸುತ್ತದೆ. ಒಂದು ಸಂಸಾರದ ಕಷ್ಟವೋ ಚಿಂತೆಯೋ ಬಂದಾಗ ಒಬ್ಬ ಹಳೆಯ ಮುದುಕಿ ಮನೆಯಲ್ಲಿದ್ದರೆ ಆಕೆಯನ್ನು ಕೇಳಿ ನಡೆಯೋಣವೆನಿಸುತ್ತದೆ. ನಮಗೆ ಪ್ರೀತಿಸುವುದಕ್ಕೆ, ನಮ್ಮೆದೆಯ ಪ್ರೀತಿರಸವನ್ನು ಅಭಿಷೇಕ ಮಾಡಲಿಕ್ಕೆ ಒಂದು ವಸ್ತು ಇದೆಯಲ್ಲ ಎಂಬುದೇ ಒಂದು ಸಂತೋಷವಾಗುತ್ತದೆ. ಅದೇ ಒಂದು ಹೆಮ್ಮೆಯಾಗುತ್ತದೆ. ಹೀಗೆ ಒಂದು ಕುಟುಂಬವು ಯಾರಾದರೊಬ್ಬಾತನನ್ನು ಅಥವಾ ಒಬ್ಬಾಕೆಯನ್ನು ಮನೆತನಕ್ಕೆ ಹಿರಿಯನು ಅಥವಾ ಹಿರಿಯಳು ಎಂದು ಭಾವಿಸಿ ಗೌರವಮರ್ಯಾದೆ ಸಲ್ಲಿಸಿದರೆ ಅದರಿಂದ ಪ್ರಯೋಜನವಾಗುವುದು, ಆ ಮುದುಕನಿಗಾಗಲಿ ಮುದುಕಿಗಾಗಲಿ ಅಲ್ಲ. ಅದು ಒಟ್ಟು ಕುಟುಂಬಕ್ಕೆ. ಯಾರನ್ನು ಹಿರಿಯರೆಂದು ಆರಿಸಿ ಕೊಳ್ಳುವುದರಲ್ಲಿ ದುರ್ಬೀನು ಹಾಕಿ ನೋಡಬೇಕಾದದ್ದಿಲ್ಲ. ಬಹುಮಂದಿಗೆ ಒಪ್ಪಿತವಾದುದನ್ನು ಸ್ಥೂಲವಾಗಿ ಅಂಗೀಕರಿಸಿಕೊಂಡರೆ ಸಾಕು.

7. ಬೇರೆ ಬೇರೆ ಕಡೆಗಳಲ್ಲಿರುವ ಅಣ್ಣತಮ್ಮಂದಿರು ವರ್ಷಕ್ಕೆ ಒಂದು ಸಾರಿಯಾದರೂ ಒಂದು ಕಡೆ ಸೇರಿ ಎರಡು ಮೂರು ದಿನವಾದರೂ ಒಟ್ಟಿಗಿರಬೇಕು. ಈ ಪುನಃ ಪುನಃ ಸಮ್ಮೇಳನ ಮಮತೆಯನ್ನು ದೃಢಪಡಿಸುತ್ತದೆ.

**ಸಹಾಯಬುದ್ಧಿ**

8. ಮಕ್ಕಳ ವಿದ್ಯೆ, ಆರೋಗ್ಯಗಳ ವಿಷಯದಲ್ಲಿ ಅಣ್ಣತಮ್ಮಂದಿರು ಭೇದಗಣನೆಯನ್ನು ಮರೆಯಬೇಕು. ಶಕ್ತನು ಅಶಕ್ತನಿಗೆ ಸಹಾಯ ಮಾಡಬೇಕು. ಹಣವಂತನು ಬಡವನಿಗೆ ಸಹಾಯ ಕೊಡಬೇಕು. ಆದರೆ ಇದು ಬಹು ನವುರು ನಾಜೂಕಿನಿಂದ ನಡೆಯಬೇಕಾದ ಕೆಲಸ. ಕೊಡುವವನಲ್ಲಿ "ನಾನು ಕೊಟ್ಟೆ" ಎಂಬ ಅಹಂಕಾರವಿರಬಾರದು. ತೆಗೆದುಕೊಳ್ಳುವವನಲ್ಲಿ "ನಾನು ಕೈಯೊಡ್ಡಿದೆ" ಎಂಬ ದೈನ್ಯ ತೋರಬಾರದು. ಅಣ್ಣ ತಮ್ಮಂದಿರಲ್ಲಿ ತಿರುಕ-ಧನಿಕ ಎಂಬ ಭೇದ ಕೊಂಚವಾದರೂ ಸುಳಿದ ಕೂಡಲೆ ಅವರ ಮಮತೆ ಕಂದಿಹೋಗುತ್ತದೆ.

9. ಮನೆತನಕ್ಕೆ ಹಿಂದಿನಿಂದ ಬಂದ ಸದಾಚಾರ ಸಂಪ್ರದಾಯಗಳನ್ನು ಎಲ್ಲರೂ ಉಳಿಸಬೇಕು. ದೇವರ ಹಬ್ಬ, ರಥೋತ್ಸವ, ಅರವಟ್ಟಿಗೆಯ ಸೇವೆ, ಗುಡಿಯಲ್ಲಿ ದೀಪಾರಾಧನೆ, ರಾಮೋತ್ಸವ-ಈ ಬಗೆಯ ಧರ್ಮಸಂದರ್ಭಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿಯೂ ಕೊಂಚವಾಗಿಯೋ ಹೆಚ್ಚಾಗಿಯೋ ಇರುತ್ತವೆ. ಇಂಥ ಸಂದರ್ಭಗಳು ಅಣ್ಣತಮ್ಮಂದಿರನ್ನು ಒಟ್ಟುಗೂಡಿಸಲು ಸಹಕಾರಿ. ಪೂರ್ವಕಾಲದಲ್ಲಿ ಬೇರೆ ಯಾವ ಸಂದರ್ಭದಲ್ಲಲ್ಲದಿದ್ದರೂ ತಂದೆತಾಯಿಗಳ ಶ್ರಾದ್ಧಕಾಲದಲ್ಲಿ ಅಣ್ಣ ತಮ್ಮಂದಿರೆಲ್ಲರೂ ಒಂದು ಕಡೆ ಸೇರುತ್ತಿದ್ದುದು ವಾಡಿಕೆಯಾಗಿತ್ತು. ಮುಖ್ಯವಾಗಿ ವರ್ಷಕ್ಕೊಂದು ದಿನವಾದರೂ ಮನೆಯವರೆಲ್ಲ ಕೂಡಿ ಕಲೆಯಬೇಕು.

**ಅಹಂಕಾರ ದಮನ**

10. ಒಂದು ಕುಟುಂಬವೇ ಆಗಲಿ ಸಮಾಜವೇ ಆಗಲಿ ಒಂದು ಸಂಸ್ಥೆಯೇ ಆಗಲಿ ಅದು ಒಡೆದುಹೋಗದೆ ಒಟ್ಟಿಗೆ ನಿಲ್ಲಬೇಕಾದರೆ ಅದಕ್ಕೆ ಸೇರಿದ ಎಲ್ಲ ಜನರೂ ತಮ್ಮ ತಮ್ಮತನವನ್ನು ಅದುಮಿಡುವುದಕ್ಕೆ ಪ್ರಯತ್ನಿಸಬೇಕು. ನಾನು ಮುಂದೆ ನಾನು ಮುಂದೆ ಎಂಬ ಅಹಂಭಾವವೇ ಮನೆಮುರುಕತನಕ್ಕೆ ಮೂಲಕಾರಣ. ಒಂದು ಭಕ್ಷ್ಯವನ್ನಾಗಲಿ ಬಟ್ಟೆಯನ್ನಾಗಲಿ ಒಡವೆಯನ್ನಾಗಲಿ ನನ್ನ ತಮ್ಮ ಅನುಭವಿಸಿದರೇನು, ನಾನಾದರೇನು? ನನ್ನ ಹೆಂಡತಿ ತೊಟ್ಟರೇನು, ತಂಗಿ ತೊಟ್ಟರೇನು? ಇದೂ ನನ್ನ ಸಂತೋಷ, ಅದೂ ನನ್ನ ಸಂತೋಷ-ಎಂಬ ಅಭೇದವೃತ್ತಿ ಬರಬೇಕು. ಈ ಅಭೇದಭಾವನೆ ಬಲಪಟ್ಟಷ್ಟೂ ಕುಟುಂಬದ ಒಟ್ಟು ಬಲ ವೃದ್ಧಿಯಾಗುತ್ತದೆ.

*(ಡಿ.ವಿ.ಜಿ. ಕೃತಿ ಶ್ರೇಣಿ 8)*

## ನಮ್ದೇಲ್ಲಾ

ಇದು ಒರು ಭಾವ್ನೆ ಅನ್ನ, ಅತ್ತಿ ಉಳ್ಳು ನಲ್ಭಾವನೆ. ಅಪ್ಡೆ ಪಾತ್ಕ ಎಂಗ್ಳದೆ ಪೆರಿಚರಣ್ತೆ ಜನು ಎಲ್ಲಾ ಎಂಗ್ಳದೆಲ್ವಾಳೇ. ಇದು ಒತ್ನೆ ಸರಿಯೋ ಅಂಗ್ರು ಅನುಮಾನ್ತಿ ಪ್ರಶ್ನೆ ವಾಂಡವೇ ವಾಂಡ. ಒಪ್ಪಡಿಯು ಎಂಗ್ಳದೇ ಒರು ಸಂಘು ಪುನರ್ರಚ್ನೆ ಆಯದೆ, ನಾಗರ್ಲೆ, ಸಾಂಸ್ಕೃತಿಕ ಕಾರ್ಯಕ್ರಮುತ್ಲೆ, ಸನ್ಮಾನು, ಪುರಸ್ಕಾರು ಇಪ್ಪಡ್ತೆ ಸಂದರ್ಭತ್ಲೆ ಚೇಂದಪ್ಪೊ, ಎಲ್ಲಾರೂ ಒರ್ತ್ರೆ ಒರ್ತ್ರು ಪಾತು ವಾಚೊಲ್ಲಿಕ್ಕಾಮ. ಅಪ್ಪೊ ಸಂಬಂಧುಂಗು ಗಟ್ಟಿ ಆಗದ್ದೆ, ಆತ್ಮೀಯತೆ ಕೂಡ ವಳಿಗ್ಲೊ, ಅನ್ನ?

ಅತ್ತಿಪಿನ್ನೆ...... ಎಂಗ್ಳದೇ ವಾತೆ – 'ಪೆರಿಚರಣ್ತೆವಾತೆ' ಆಮಾ ಅನ್ನ. ವಾತೆ ಕೂಡ ಎಲ್ಲಾರ್ಯೂ ಒನ್ನಾಯಿ ಚೇತುದ್ದೆ ಅಪ್ಡಯೇ ನಾಂಗೆಲ್ಲಾ ಒನ್ನು ಅಂಗ್ರು ಭಾವ್ನೆ ಜಾಸ್ತಿ ಪಣ್ಣದ್ದೆ. ಅದು ಒಪ್ಪೋ ಅನ್ನ – 'ನಾಂಗು ಎಂಗ್ಳದೆ ವಾತೆಲೇ ವಾಚೊಲ್ರಪ್ಪೊ' ವಾತೆ ಒಪ್ಪೋದು ಜನು, ಸಂಬಂಧು, ಸಂಸ್ಕೃತಿ, ಧರ್ಮು, ದೇಶ್ಮೆ ನಲ್ ವಳೀಲೆ ಕೊಂಡ್ಪೋಗದ್ದೆ.

ಎಂಗಳ್ದೆ ವಾತೆ ತಮಿಳು (ಅರ್ರು), ಕನ್ನಡ ಮಿಶ್ರಣ ಅನ್ನು ಚೊಲ್‌ಲೊ ಅಮಾ! ಅಪ್ಡಯೇ ಇರಕ್ಕುದು. 50:50 ಪ್ರಮಾಣತ್ಲೆ ಆದೆ ಅಂಗ್ಲೊ. ಒಂಗ್ಯೋ ಕೊಂಚು ಮಲಯಾಳಂ ವಾತೆಯು ಚೇಂದ ಅದ್ಯೋ – ಉದಾ: ಅಡಕ್ಲೆ (ಅಡಿಗೆಮನೆ), ಪಿನ್ನೆ (ಮತ್ತೆ) ನಾಂಗು ತಮಿಳುನಾಡನ್ನು ವಂದಪ್ಪೋ ಅರ್ರು ಪೂರ್ತಿ ವಾಚೊಲ್ಲಾದೆ. ಅಪ್ಡಯೇ ಕನ್ನಡು ಸರ್ರ ವಾಚೊಲ್ಲತ್ತುವರಾ ಇರ್ಕಲ್ಲೊ, ಅಪ್ಪೊ ಎಂಗಳ್ದೆ ವಾತೆ (ಪೆರಿಚರಣ್ತಿದು) ಪರಂದದೆ ಅಂಬಿಯಾಕ್ಕುದ್ದು. ಲಿಪಿ ಇಲ್ಲೆ, ಆನ್ಕ ಓದು ವಾಚ್ಚೊಲ್ಲಾಮೇ, Officially ನಾಂಗು ಕನ್ನಡ ಮೇ ಎಂಗಳ್ದೆ ಮಾತೃಭಾಷೆ ಅನ್ನು ಚೊಲ್ಲುದ್ದು. ಇತ್ತಿ ಅನ್ನು ಎಂಗಳ್ದೆ ಹೃದಯ ವೈಶಾಲ್ಯತೇ ಒಪ್ಪತ್ತಾದ್ದು ಅನ್ನು ತೆಳಿಗಿದ್ದೆ.

ಎಂಗ್ಳದೆಲ್ವಾಳೇ ಆನ ದಿವಂಗತ ಶ್ರೀ ಡಿ.ವಿ.ಜಿ. ಕನ್ನಡತ್ಲೆ ಸಹಜ, ಸರಳ, ನಿತ್ಯಸತ್ಯಂಗಳೇ 'ಮಂಕುತಿಮ್ಮನ ಕಗ್ಗ' ಕವನ ಸಂಗ್ರಹತ್ಲೆ ಒಳ್ದವಾಳೇ, ಸರಳ್ಮೆ ಜೀವ್ನು ಪಣ್ಣಿ, ಎಂಗಳ್ದೆ ವಾತ್ಯೇ ವಾಚೊಲ್ಕುಂಡೇ ಇಪ್ಪತ್ತ ಕಾವ್ಯ ಸಂಗ್ರಹಮೆ ಕನ್ನಡತ್ತು ಕುಡ್ತ ಆವಾಳೆ. ಅದ್ಭುತು! ಅದ್ಭುತು! "ಶ್ರೀ ಡಿ.ವಿ.ಜಿ. ಎಂಗ್ಳದೆಲ್ವಾಳೇ" ಅನ್ನು ಪೆರ್ಮೆ (proud). ಇತ್ತೆ ಚೊಲ್ಲೂಕ್ಕಾಮಾ.

ಎಂಗಳ್ದೆ ವಾತೇಲೆ ಒತ್ತ್ಯೋ ಪದಂಗಳ್ಲೆ ವಿಶೇಷು ಅದೆ. ಉಚ್ಚಾರಣೆ ಹೆಚ್ಚು ಕಮ್ಮಿ ಒನ್ನೆ, ಅರ್ಥು ವೇರ್ವೇರೆ (different)

ಉದಾ: ಮಂಚು (cot) ಮಂಚು (human being)<br>
ಮರಂದು (wedicine) ಮರಂದು (forget)<br>
ಕಳ್ವಿ (wash) ಕಳವಿ (old lady)<br>
ಕರ್ರು (black) ಕರಪು (cockroach)

ಅತ್ನೈ ಅನ್ನು, ಎಂಗ್ಳದೆಲ್ವಾಳ್ಳೆ ಒತ್ತ್ಯೊ ಪೇರು ಎಲ್ಲಾರಕು ಸಹಾಯ ಪಣ್ರ್ವಾ ಆವಾಳೆ. ಬಾಟ್ಲಿಬಾಯ್ ಶ್ರೀನಿವಾಸ್ ಎಲ್ಲಾರಕು ತೆರಿಂಜ್ವಾಳೆ. ಆವಾಳ್ಕು ಇಪ್ಪಡ್ತ ಮನೋಭಾವು ಅದೆ. ಇವ ಎಂಗ್ಳದೆಲ್ವಾಳೇ ಅಂಗುದ್ದು. ಪೆಡ್ತಾ ನಾಂಗು ಪೆರಿಚರಣ್ತೆಲ್ವ ಎಲ್ಲಾ ಒಪ್ಪೋದು ಎಂಗ್ಳದೆಲ್ವಾಳೇ! ಇದು ಶಾನೆ ಶಾನೆ ನಲ್ಭಾವನೆ!

"ಪೆರಿಚರಣ್ತಿಲ್ವಾಳ್ಕು ಉಘೇ! ಉಘೇ!!"

■ ಉಮಾ ಕೃಷ್ಣದಾಸ್

## ಚುರುಮುರಿ

| | | |
|---|---|---|
| ಬರುವುದು ಹೋಗುವುದು | : | ಸುಖ-ದುಃಖ |
| ಬಂದರೆ ಹೋಗದು | : | ಖ್ಯಾತಿ – ಅಪಖ್ಯಾತಿ |
| ಹೋದರೆ ಬರದು | : | ಮಾನ-ಪ್ರಾಣ |
| ಬರದೆ ನಿಲ್ಲದು | : | ತಾರುಣ್ಯ-ಮುಪ್ಪು |
| ಬಿಡದೆ ಬರುವುದು | : | ಪಾಪ-ಪುಣ್ಯ |

*The word one Thousand contains the letter "a" but none of the words one to nine hundred ninty nine has the letter "a"*

***S. Srini***

## ಕಿತ್ತಿಗಾನಹಳ್ಳಿ : ಒಂದು ನೋಟ

ಬೃಹತ್‌ಚರಣ ಬಂಧುಗಳಿಗೆ ಶತಮಾನದ ಹಿಂದಿನಿಂದಲೂ ಒಂದು ಪವಿತ್ರ ಕ್ಷೇತ್ರ. ಇದು ಬೆಂಗಳೂರಿನಿಂದ ಹದಿನಾಲ್ಕನೇ ಮೈಲಿ ದೂರದಲ್ಲಿರುವ ಕ್ಷೇತ್ರ. ಲಾಯರ್ ವೆಂಕಟರಮಣಯ್ಯ ಮತ್ತು ಅಮ್ಮಣ್ಣಮ್ಮ ದಂಪತಿಗಳಿಂದ ನಿರ್ಮಾಣವಾದ ಶ್ರೀಶ್ರೀನಿವಾಸ ದೇವರ ದೇವಾಲಯ ಹಾಗೂ ಪಾರ್ಶ್ವದಲ್ಲಿ ಬೃಹತ್ ಚರಣ ಬಂಧುಗಳಿಂದ ಆದ ಇಪ್ಪತ್ತೈದಕ್ಕೂ ಹೆಚ್ಚು ನಾಗದೇವತೆಗಳ ಪ್ರತಿಷ್ಠಾಪನೆಯಾಗಿ ಅಲ್ಲಿಯೇ ನೆಟ್ಟ ಅಶ್ವತ್ಥಮರ ಬೇವಿನ ಮರಗಳು ಇವೆ. ಕೌಂಡಿನ್ಯಸ ಗೋತ್ರದವರಿಂದ ನಾಗಾರಾಧನೆಯು ಪ್ರತಿವರ್ಷ ಫಾಲ್ಗುಣ ಶುದ್ಧ ಪಂಚಮಿ ಮತ್ತು ಷಷ್ಠಿದಿನ ಶತಮಾನದಿಂದ ನಡೆದುಬರುತ್ತಿರುವ ಒಂದು ಆಚರಣೆ.

ಇದರ ಪೂಜೆಯ ನಿರ್ವಹಣೆಗಾಗಿ ಶ್ರೀ ವೆಂಕಟರಮಣಯ್ಯ ಅಮ್ಮಣ್ಣಮ್ಮ ಮತ್ತು ಇತರೆ ಪ್ರತಿಷ್ಠಿತ ಬೃಹತ್ ಚರಣ ಬಂಧುಗಳು ಶ್ರೀಯುತರಾದ ಶ್ರೀ ಶಾಮಣ್ಣ ದೀಕ್ಷಿತರಿಗೆ ವಹಿಸಿಕೊಟ್ಟರು. ಅವರ ಮುಂದಿನ ಸಂತತಿಯವರು ಶ್ರೀ ನಂಜುಂಡ ದೀಕ್ಷಿತರು ಹಾಗೂ ಅವರ ಸಹೋದರರು ಇಂದಿನವರೆಗೂ ನಡೆಸುತ್ತಿದ್ದಾರೆ.

ಶ್ರೀನಿವಾಸ ದೇವಾಲಯದ ಮುಂದೆ ಅಂದು ಚಿಕ್ಕ ಕಂದಕವಿದ್ದು ಅದರಲ್ಲಿ ನೀರು ತುಂಬಿಸಿ ಉಪಯೋಗಿಸುತ್ತಿದ್ದರು. ಎದುರಿಗಿರುವ ದೇವಸ್ಥಾನಕ್ಕೆ ಸೇರಿದ ತೆಂಗಿನ ತೋಟದಲ್ಲಿ ಅನ್ನ ಸಂತರ್ಪಣೆ (ವನಭೋಜನ) ನಡೆಯುತ್ತಿತ್ತು. ಕೌಂಡಿನ್ಯಸ ಗೋತ್ರದವರಿಂದ ಕೋಸಂಬರಿ, ಪಾನಕ, ನೀರು ಮಜ್ಜಿಗೆ ಇತ್ಯಾದಿ (ಅರವಟ್ಟಿಗೆ) ನಡೆಸುತ್ತಿದ್ದಾರೆ. ಇಂದು ಇರುವಂತೆ ಛತ್ರದ ಸೌಲಭ್ಯ ಇರಲಿಲ್ಲ. ನಾಗಾರಾಧನೆಯ ದಿನ ಶಾಮಣ್ಣ ದೀಕ್ಷಿತರೇ ಊಟದ ವ್ಯವಸ್ಥೆ ಮಾಡುತ್ತಿದ್ದರು. ಕೆಂಪಕ್ಕಿ ಅನ್ನ (ಹಾಲುಬ್ಬಲು) ಜೊತೆಗೆ ಬೃಹತ್ ಚರಣದ ಇಷ್ಟದ ಕೂಟು, ವಡೆ-ಪಾಯಸ ಎಲ್ಲರಿಗೂ ವಿನಿಯೋಗವಾಗುತ್ತಿತ್ತು. ಈ ಅಡಿಗೆಯ ನೀರಿಗಾಗಿ ಎತ್ತಿನಗಾಡಿಯಲ್ಲಿ ದೂರದ ಬಾವಿಗಳಿಂದ ತರಬೇಕಾಗುತ್ತಿತ್ತು.

ಸುತ್ತಮುತ್ತಲ ಹಳ್ಳಿಗಳಿಂದ ಎತ್ತಿನಗಾಡಿಗಳಲ್ಲಿ ಜನ ಬರುತ್ತಿದ್ದರು. ಬೆಂಗಳೂರಿನಿಂದ ಬರಲು ಅಮೀರ್ ಹಾಗೂ ಗಿರಿಜಾ ಶಂಕರ್ ಬಸ್ಸುಗಳ ಸೌಲಭ್ಯವಿತ್ತು. ಹಾಗಾಗಿ ನೂರು-ಇನ್ನೂರು ಜನರು ಸೇರುತ್ತಿದ್ದರು. ಖರ್ಚಿಗಾಗಿ ದಾನ ರೂಪದಲ್ಲಿ ಹಾಗೂ ಇದಕ್ಕಾಗಿ ಜಮೀನಿನ ಫಸಲು ಹಾಗೂ ಕಿತ್ತಿಗಾನಹಳ್ಳಿ ಬೃಹಚ್ಚರಣ ಗೃಹಸ್ಥರು ನಿರ್ವಹಿಸುತ್ತಿದ್ದರು. ಒಟ್ಟಿನಲ್ಲಿ ಆ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಶ್ರಮಿಸುತ್ತಿದ್ದರು.

ಕಾಲಕ್ರಮೇಣ ಅನುಕೂಲಗಳು ಹೆಚ್ಚಿದಂತೆ ಹೆಚ್ಚೆಚ್ಚು ಮಂದಿಸೇರಿ ಇನ್ನೂ ವಿಜೃಂಭಣೆಯಿಂದ ನಡೆಯುತ್ತಿದೆ. ದೇವಸ್ಥಾನ, ಛತ್ರ, ನಾಗರಕಟ್ಟೆಯ ಜೀರ್ಣೋದ್ಧಾರ, ರಥೋತ್ಸವದ ಅಗತ್ಯವಾದ ಕೆಲಸಗಳು ಸಾಕಷ್ಟು ಪ್ರಗತಿಯಾಗಿದ್ದು, ಇನ್ನೂ ಅನೇಕ ಕೆಲಸಗಳು ನಡೆಯಬೇಕಿದೆ.

ಇದಕ್ಕಾಗಿ ಇಂದಿನ ಸುಸಂಸ್ಕೃತಿಯ ಜನತೆಯ ಸಹಕಾರ ಮತ್ತು ಆರ್ಥಿಕ ನೆರವು ಬೇಕಿದೆ, ಈಗ ಸುಮಾರು ಒಂದು ಸಾವಿರದಿಂದ ಸಾವಿರದ ಐನೂರು ಮಂದಿ ಸೇರುತ್ತಿದ್ದು ಇನ್ನೂ ಹೆಚ್ಚಿನ ಮಂದಿ ಸೇರುವ ಅಂದಾಜಿದೆ.

ಈ ಕಾರ್ಯದಲ್ಲಿ ಸುಪ್ರಸಿದ್ಧ ಡಿ.ವಿ.ಜಿ.ಯವರು ಡಾ. ದಾನಪ್ಪ, ತಿಮ್ಮಪ್ಪಯ್ಯ, ಆಡೇಸಣ್ಣಹಟ್ಟಿಯ ಶ್ರೀ ಲಕ್ಷ್ಮಣಯ್ಯರ್, ಆನೇಕಲ್ ಹೆಡ್‌ಮಾಸ್ಟರ್ ಆರ್. ಕೃಷ್ಣಮೂರ್ತಿ ಹಾಗೂ ಇನ್ನೂ ಅನೇಕ ಮಹನೀಯರುಗಳ ಶ್ರಮ ಈ ಕಾರ್ಯದಲ್ಲಿ ಸೇರಿ ಹೋಗಿದೆ.

■ ಜಿ.ಎಸ್. ಗೌರಮ್ಮ

## BRUHACHARANAM

Brahacharanam is a sub-sect of the Iyer community of Tamil Brahmins. The word "Brahacharanam" is a derivation of the Sanskrit word Brhatcharanam. Like other Iyer communities, they follow the Advaita philosophy propounded by Adi Shankara. However, the Brahacharanam are more Saivite than the Vadamas. The Brahacharanams, along with the Vadamas, form the major portion of the Kerala Iyer community.

The Brahacharanams, like the Vadamas, have a distinctive martial tradition which differentiate them from other Iyer communities. Members of the community served as Senapatis or army commanders under the Chola kings Raja Raja Chola I and Rajendra Chola I.

**Etymology**

The word bruhat in Sanskrit means "great," "vast" or "significant" and the word charanam refers to feet. The name Brahacharanam can be thus literally translated as "the great feet" as a representation of the status as a Guru as those who follow the footsteps of the Great.

**Origin**

Their exact origin are not clear but their presence in the Tamil Kingdoms extend back at least to the reign of Parantaka Chola II, who is said to have brahmarayars as ministers. Many of the agraharam villages of the Brahacharanam also have very ancient origin.

■ *Rajapur Subbarao*



### ನೀನೂ ಕವಿ

ಬಡಿದೆಬ್ಬಿಸು, ನಿನ್ನ ಕವಿ ಹೃದಯವ
ಜೋಡಿಸು, ಅರ್ಥಗರ್ಭಿತ ಸಾಲುಗಳ
ನೆನೆದು, ಹಿರಿಯ ತಲೆ ಡಿ.ವಿ.ಜಿ.ಯ

ನೋಡು, ಮೋಡಿಯಿದು, ಕವಿತೆಯ ಮಾಡಿ
ಇದ ಹೇಳು, ಸಹೃದಯ ಸಜ್ಜನರ ಜೋಡಿ
ಹರಿಸು, ಕವಿತೆಗಳ ಕೋಡಿ ಕೋಡಿ

■ ಕಾಚರಕನಹಳ್ಳಿ ನಟರಾಜ್


# ನಾಗಾರಾಧನೆ-೨೦೧೨



ನಾಗಸುಬ್ರಹ್ಮಣ್ಯ ಸ್ವಾಮಿ



ಶ್ರೀದೇವಿ ಭೂದೇವಿ ಸಮೇತ ಶ್ರೀನಿವಾಸಸ್ವಾಮಿ



ಸುಬ್ರಹ್ಮಣ್ಯ ಉತ್ಸವಮೂರ್ತಿ

# ನಾಗಾರಾಧನೆ-೨೦೧೨



ಭಕ್ತರಿಂದ ಪೂಜೆ



ಪ್ರಸಾದ ಸ್ವೀಕಾರ







ಸ್ವಾಗತ ಸಮಿತಿ ಸದಸ್ಯರು




ಕಾರ್ಯನಿರತ ಸದಸ್ಯರು



ಸುಬ್ರಹ್ಮಣ್ಯ ಸ್ವಾಮಿ ಉತ್ಸವ



ಕ್ಷೀರಾಭಿಷೇಕ



ವಿರಾಜಮಾನ ಸುಬ್ರಹ್ಮಣ್ಯಸ್ವಾಮಿ



ಪೂಜಾನಿರತ ಭಕ್ತರು

# ಶುಭಾಶಯಗಳು

ಸಂಘದ ಸದಸ್ಯರಾದ ಶ್ರೀ ಆರ್.ಕೆ. ಅನಂತರಾಮ್ ಶ್ರೀಮತಿ ವಿಮಲಾ ಅನಂತರಾಮ್‌ರವರ ಮೊಮ್ಮಗ ಮತ್ತು **ಶ್ರೀ ಶ್ರೀಕಾಂತ್ ಮತ್ತು ಶ್ರೀಮತಿ ವಿದ್ಯಾರವರ** ಸುಪುತ್ರ **ಚಿ॥ ಅಭಯ್ ಕೃಷ್ಣನಿಗೆ** ೨೬-೪-೨೦೧೨ರಂದು ಉಪನಯನ ಜರುಗಿದೆ. ವಟುವಿಗೆ ಬೃಹಚ್ಚರಣ ಸಂಘವು, ಆರೋಗ್ಯ ವಿದ್ಯೆ ಭಗವಂತ ಕರುಣಿಸಲೆಂದು ಹಾರೈಸುತ್ತದೆ.

✣ ✣

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಬಿ. ಸುರೇಶ್ ದಂಪತಿಗಳು ೪-೩-೨೦೧೨ರಂದು ನೂತನ ಗೃಹಪ್ರವೇಶ ಮಾಡಿದ ಶುಭ ಸಂದರ್ಭದಲ್ಲಿ ಸಂಘಕ್ಕೆ ರೂ. ೩,೦೦೦/- ನೀಡಿರುವುದಕ್ಕೆ ಸಂಘವು ಆಭಾರಿ. ಶ್ರೀ ಸುರೇಶ್ ಕುಟುಂಬದವರಿಗೆಲ್ಲಾ ಶುಭ ಹಾರೈಸುತ್ತೇವೆ.

✣ ✣

ಸಂಘದ ಸದಸ್ಯರಾದ ಶ್ರೀಮತಿ ರಮಾದೇವಿಯವರು ಬೆಂಗಳೂರಿನಲ್ಲಿ ತಮ್ಮ ಮಗಳು ಚಿ॥ ಸೌ॥ ಡಾ. ಸುಮಾರವರನ್ನು ಡಾ. ಪ್ರಹ್ಲಾದ್‌ರವರಿಗೆ ಕೊಟ್ಟು ಇತ್ತೀಚೆಗೆ ವಿವಾಹ ನೆರವೇರಿಸಿದರು. ಸಂಘವು ನೂತನ ದಂಪತಿಗಳಿಗೆ ಶುಭಹಾರೈಸುತ್ತದೆ.

✣ ✣

ನಮ್ಮ ಸಂಘದ ಸದಸ್ಯ ಶ್ರೀ ನಾಗೇಶ್‌ರವರ ಮಾವಂದಿರೂ ಹಾಗೂ ಸಂಘದ ಹಿತೈಷಿಗಳಾದ ಶ್ರೀ ವೈ.ಕೆ. ಶ್ರೀನಿವಾಸರ ೭೦ನೇ ವರ್ಷದ (೧೮-೩-೧೨) ಹುಟ್ಟು ಹಬ್ಬ, ಭೀಮರಥಶಾಂತಿ ಮಹೋತ್ಸವದ ಸಂದರ್ಭಕ್ಕೆ ಸಂಘವು ಹಿರಿಯ ಸಜ್ಜನರಾದ ಶ್ರೀನಿವಾಸ್ ಹಾಗೂ ಶ್ರೀಮತಿ ಸ್ವರ್ಣಾಂಬರವರಿಗೆ ಶುಭಕೋರುತ್ತದೆ.

✣ ✣

ನಮ್ಮ ಸಂಘದ ಸದಸ್ಯರಾದ ಶ್ರೀ ಆರ್.ಎಸ್. ಪ್ರಶಾಂತ, ಶ್ರೀಮತಿ ನಳಿನರವರ ಪುತ್ರ ಚಿ॥ ಆದಿತ್ಯರಾಂನ ಉಪನಯನ ೩೦-೧-೨೦೧೨ರಂದು ರಾಘವೇಂದ್ರ ಮಠದಲ್ಲಿ ನಡೆದಿದ್ದು ವಟು ಆದಿತ್ಯರಾಂಗೆ ವಿದ್ಯೆ, ಆರೋಗ್ಯವಿದ್ದು ಸಜ್ಜನ ನಾಗರೀಕನಾಗಲೆಂದು ಸಂಘ ಹಾರೈಸುತ್ತದೆ.

## ಲೇಖನಗಳಿಗೆ ಆಹ್ವಾನ

'ಬೃಹಚ್ಚರಣ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಬೃಹಚ್ಚರಣ ಬಂಧು ಲೇಖಕರು ಲೇಖನಗಳನ್ನು ಕಳುಹಿಸಬಹುದು. ಲೇಖನಗಳು ಆದಷ್ಟೂ ಸಂಕ್ಷಿಪ್ತವಾಗಿರಬೇಕೆಂದು ವಿನಂತಿ.

ವಿಳಾಸ

**'ಬೃಹಚ್ಚರಣ'**

**ನಂ-8, 3ನೇ ಕ್ರಾಸ್, ಅಣ್ಣಯ್ಯಪ್ಪ ಬ್ಲಾಕ್**

**ಕುಮಾರಪಾರ್ಕ್ ವೆಸ್ಟ್, ಬೆಂಗಳೂರು – 560 020**

**9900113298 / 9902145359 / 9845055582**

# ಓದುಗರ ಪತ್ರಗಳು

ಕಾರ್ಯದರ್ಶಿಗಳಿಗೆ

ತಾವು **'ಬೃಹಚ್ಚರಣ'** ವಾರ್ತಾಪತ್ರದಲ್ಲಿ, ಪದಬಂಧ ಪ್ರಕಟಿಸುತ್ತಿರುವುದಕ್ಕೆ ವಂದನೆಗಳು. ಇದೇ ರೀತಿ ಪದಬಂಧ ನಿಲ್ಲದೆ ಪ್ರಕಟಿಸುತ್ತಿರಿ. ಉತ್ತರ ಸರಿ ಬರೆದವರಿಗೆ ಬಹುಮಾನ ಅಥವಾ ಅವರ ಹೆಸರನ್ನಾದರೂ ಪ್ರಕಟಿಸಿ.

**ಕೆ.ಎಸ್. ಉಮಾ ಶಶಿಧರಕೃಷ್ಣನ್**

★ ★

ಅಧ್ಯಕ್ಷರಿಗೆ,

**'ಬೃಹಚ್ಚರಣ'** ವಾರ್ತಾಪತ್ರದಲ್ಲಿ ವಿಶೇಷವಾಗಿ ಶ್ಯಾವಕನಹಳ್ಳಿ, ಸುಬ್ರಹ್ಮಣ್ಯ ಅಯ್ಯರ್ ಶ್ರೀನಿವಾಸನ್ ಬರೆದ ಕೈಲಾಸ ಮಾನಸ ಸರೋವರ ಯಾತ್ರೆಯ ಬಗ್ಗೆ, ಹಿರಿಯರಾದ ವೈ.ಎಸ್. ಗುಂಡಪ್ಪನವರ ಬಗ್ಗೆ ಬರೆದ ಲೇಖನ ಚೆನ್ನಾಗಿದೆ. ಚಾಮರಾಜಪೇಟೆಯ ನಮ್ಮ ಮನೆಗೆ ಅವರು ಬರುತ್ತಿದ್ದುದು ನೆನಪಾಯಿತು. ಎಲ್ಲಾ ಮಾಹಿತಿಯಿರುವ ದಿನಚರಿ ದರ್ಶಿನಿ ಮಾಡಿಸಿದ ನಮ್ಮ ಬಂಧುಗಳಿಗೆ ವಂದನೆ.

**ಎಸ್.ಎನ್. ಕೃಷ್ಣಮೂರ್ತಿ**

ಅರಿಶಿನ ಕುಂಟೆ, ಬೆಂಗಳೂರು

★ ★

## ಶ್ರೀ ಜಿ.ಎಸ್. ಸತ್ಯಮೂರ್ತಿ

ಗುಂಜೂರು ವಂಶಸ್ಥರಲ್ಲಿ "ಡಿಯರ್ ಬ್ರದರ್" ಎಂದೇ ಹೆಸರಾಗಿರುವ ಕುತ್ಸಗೋತ್ರದವರಾದ ಶ್ರೀನಿವಾಸಯ್ಯ ಮತ್ತು ಕಮಲಮ್ಮನವರ ಮಗನಾದ ಶ್ರೀ ಜಿ.ಎಸ್. ಸತ್ಯಮೂರ್ತಿಯವರು ಎಚ್.ಎ.ಎಲ್.ನಲ್ಲಿ ತಾಂತ್ರಿಕ ಅಭಿಯಂತರಾಗಿ 28ವರ್ಷ ಸೇವೆ ಮಾಡಿ ನಿವೃತ್ತರಾಗಿರುತ್ತಾರೆ. ಎಚ್.ಎ.ಎಲ್.ನಲ್ಲಿದ್ದರೂ ಕೂಡ ಮೊದಲಿನಿಂದಲೂ ಬೋಧನೆಯಲ್ಲಿ ಆಸಕ್ತಿ ಹಳ್ಳಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಸುಮಾರು 20 ವರ್ಷ ಬೋಧನೆ ಅನುಭವ. ನಿವೃತ್ತಿಯ ನಂತರ ಬೆಂಗಳೂರು ನಗರಜಿಲ್ಲಾ ಸಾಹಿತ್ಯಪರಿಷತ್ ಇಂದ ನಮ್ಮವರೇ ಆದ ಹಿರಿಯ ದಿಗ್ಗಜ ಶ್ರೀ ಡಿ.ವಿ.ಜಿ.ಯವರ ಬಗ್ಗೆ "ಸಾಹಿತ್ಯ ಶ್ರೀಮಂತ ಸಾಹಿತಿ ಧೀಮಂತ" ಎನ್ನುವ ಕಿರುಹೊತ್ತಿಗೆ ತಂದಿದ್ದಾರೆ. ನಂತರ ಇವರಿಂದ ಈವರೆಗೆ "ಜಗದ ಬಾಳೆಯ ತೋಟ" ಮತ್ತು "ಕನ್ನಡಿಯಲ್ಲಿ ಕಂಡ ಮುಖ" ಕವನ ಸಂಕಲನ ಮತ್ತು "ಬಂಡೆ ಹೊಲದ ನಡುವೆ" (ಜೀವನ) "ಕದಂಬ" ಸಾಹಿತ್ಯ ಮಿಶ್ರಣ ಮತ್ತು "ವೈದ್ಯೋ ನಾರಾಯಣೋ" ಪರಿಚಯ ಹೊತ್ತಿಗೆಗಳು, ಸಾಹಿತ್ಯ ಕ್ಷೇತ್ರಕ್ಕೆ ಸಂಕಲಿಕೆ ಆಗಿರುತ್ತದೆ. ಇದಲ್ಲದೇ ಬೃಹಚ್ಚರಣ ಮಂಡಳಿಗೆ ಕಾರ್ಯಕಾರಿಸಮಿತಿ ಸದಸ್ಯರಾಗಿ ತಮ್ಮ ಸೇವೆ ಮತ್ತು ಸಲಹೆಗಳು ಸಂಘದ ಅಭಿವೃದ್ಧಿಗೆ ಇವರ ಕೊಡುಗೆ. ಮತ್ತೊಂದು ಪುಸ್ತಕ ಪ್ರಕಟಣೆಯ ಹಂತದಲ್ಲಿದೆ. ಬೃಹಚ್ಚರಣದ ಸಮುದಾಯದಲ್ಲಿ ಇದೀಗ ಹಿರಿಯ ಮತ್ತು ಮೆಚ್ಚುಗೆ ವ್ಯಕ್ತಿಯಾಗಿ ಗೌರವಾನ್ವಿತರಾಗಿರುತ್ತಾರೆ.

■ **ಆರ್.ಎನ್. ವೆಂಕಟಸುಬ್ಬರಾವ್** (ನಟರಾಜ್)

Book-Post

To, ______________________

______________________

______________________

ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ

Published by Sri S Soma Sundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Ila Mudrana, No. 36, 40Ft. Road, Raghavanagar, NTY Layout, Bengaluru-560 026.